ಸಂಚಿಕೆ
5


ಖಾಸಗಿ ಪ್ರಸಾರಕ್ಕಾಗಿ

# ಜಲ ಸಂಪದ

## ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

### ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ ವಾರ್ತಾಪತ್ರ

ಸೆಪ್ಟೆಂಬರ್–ಅಕ್ಟೋಬರ್ 2020



**ಈ ಸಂಚಿಕೆಯಲ್ಲಿ...**


- ತುಂಗಭದ್ರಾ ಬಯಲಿನಲ್ಲಿ ದೇಸಿ ಭತ್ತಗಳ ಕಲರವ!
- ಗಮನ ಸೆಳೆಯುತ್ತಿರುವ ಸುಸ್ಥಿರ ಕೃಷಿ ಹೆಜ್ಜೆಗಳು
- ಕಾಲುವೆಯ ದಂಡೆಗಳ ಭದ್ರತೆಗೆ ಮೇವಿನ ಬೆಳೆ
- ಫಲ ಕೊಡುತ್ತಿರುವ ಹೊಲಿಗೆ ಕೌಶಲ್ಯ ತರಬೇತಿಗಳು
- ದೇಸಿ ಭತ್ತದ ತಳಿ ಬೆಳೆದ ಕಥೆ
- ಡಯಾಂಚ; ಮಣ್ಣಿಗೆ ಹೊದಿಸಿದ ಕವಚ
- ನೀರು ಬಳಕೆದಾರರ ಸಹಕಾರ ಸಂಘಗಳ ಚುನಾವಣಾ ಪ್ರಕ್ರಿಯೆ
- ನೀರುಳಿತಾಯದ ನೇರ ಭತ್ತ ಬಿತ್ತನೆ ವಿಧಾನ
- ಕಡಿಮೆ ವೆಚ್ಚದಲ್ಲಿ ಎರೆಹುಳು ಗೊಬ್ಬರ ತಯಾರಿಕೆ
- ಕೈ ಹಿಡಿದ ಪುಷ್ಪ ಕೃಷಿ

# ತುಂಗಭದ್ರಾ ಬಯಲಿನಲ್ಲಿ ದೇಸಿ ಭತ್ತಗಳ ಕಲರವ!

ಗಂಗಾವತಿ ಭತ್ತದ ಕಣಜ. ಕಣ್ಣು ಹಾಯಿಸುವಷ್ಟು ದೂರ ಭತ್ತದ ಗದ್ದೆ ಬಿಟ್ಟರೆ ಬೇರೇನೂ ಕಾಣದು. ಯಥೇಚ್ಛ ಕಳೆನಾಶಕ, ಕ್ರಿಮಿನಾಶಕ, ರಾಸಾಯನಿಕ ಉಂಡು ಬೆಳೆಯುವ ಅಧಿಕ ಇಳುವರಿ ತಳಿಗಳು ತುಂಗಭದ್ರಾ ಬಯಲನ್ನು ವಿಷದ ಮಡುವಾಗಿಸಿವೆ. ಸೋನಾ ಅಕ್ಕಿ ತಿನ್ನುವ ಗ್ರಾಹಕ, ಅದನ್ನು ಬೆಳೆವ ರೈತ ಇಬ್ಬರೂ ವಿಷಮಾನವರೇ!

ಗಂಗಾವತಿಯ ಭತ್ತದ ಗದ್ದೆಗಳಲ್ಲಿ ದೇಸಿ ಭತ್ತಗಳನ್ನು ಪರಿಚಯಿಸುವ ಪ್ರಯತ್ನವನ್ನು ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ ಮಾಡಿದೆ. ರಾಯಚೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಸ್ಮೆಕ್ ಸಂಸ್ಥೆ ಜೊತೆ ಗೂಡಿ, 58 ದೇಸಿ ಭತ್ತದ ತಳಿಗಳನ್ನು ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ಫಾರಂನಲ್ಲಿ ಬೆಳೆಸಲಾಗಿತ್ತು. ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ದೇಸಿ ಭತ್ತಗಳನ್ನು ಉಳಿಸುವ ಮೊದಲ ಪ್ರಯತ್ನವಿದು.

ಹಿರಿಯ ತಳಿ ವಿಜ್ಞಾನಿ ಡಾ. ಮಹಂತ ಶಿವಯೋಗಯ್ಯ ಮತ್ತು ಕೇಂದ್ರದ ಮುಖ್ಯಸ್ಥರಾದ ಡಾ. ಮಸ್ತಾನಾ ರೆಡ್ಡಿಯವರ ನೇತೃತ್ವದಲ್ಲಿ ದೇಸಿ ತಳಿಗಳ ಮೌಲ್ಯಮಾಪನ ನಡೆಯುತ್ತಿದೆ. ನವರ, ಸಿದ್ದಸಣ್ಣ ಅಂದನೂರು ಸಣ್ಣ, ರಾಜಮುಡಿ, ಪ್ರೋಟೀನ್ ರೈಸ್ (ಡಂಬರ ಸಾಲಿ) ಮುಂತಾದ ತಳಿಗಳು ಇಲ್ಲಿವೆ. ವಿಜಯನಗರ ಕಾಲುವೆಗಳ ವ್ಯಾಪ್ತಿಯ 50ಕ್ಕೂ ಹೆಚ್ಚಿನ ರೈತರು ಬರುವ ಬೇಸಿಗೆ ಹಂಗಾಮಲ್ಲಿ ದೇಸಿಭತ್ತದ ತಳಿಗಳನ್ನು ಬೆಳೆಸಲು ಮುಂದೆ ಬಂದಿರುವುದು ಆಶಾದಾಯಕ. ವಿಜಯ ನಗರ ಕಾಲುವೆಗಳ ಅಚ್ಚುಕಟ್ಟು ಮತ್ತು ತುಂಗಭದ್ರಾ ನದಿ ಬಯಲು ದೇಸಿಯ ಭತ್ತಗಳ ತವರಾಗಲಿ ಎಂಬ ಆಶಯ.

**ಮುಖಪುಟ ಚಿತ್ರಗಳ ವಿವರ :** (ಎಡದಿಂದ ಬಲಕ್ಕೆ) 1) ಕಡಿಮೆ ಖರ್ಚಿನ ಎರೆಹುಳು ಘಟಕ ವೀಕ್ಷಣೆ 2) 64 ತಳಿ ಭತ್ತದ ಪ್ರಾತ್ಯಕ್ಷಿಕೆ 3) ದೇವಿಕಮ್ಮ, ಬಂಗಾರಕಡ್ಡಿ ಭತ್ತ ಸಂರಕ್ಷಕರು 4) ಹೊಸಳ್ಳಿ ರೈತರ ಸಭೆ 5) ಹೊಸಳ್ಳಿ ಭತ್ತದ ಕ್ಷೇತ್ರೋತ್ಸವ 6) ಬಂಡಿಹರ್ಲಾಪುರ ಸಂಘ 7) ದೇಸಿ ಭತ್ತ ವೀಕ್ಷಣೆ 8) ನರಸಾಪುರ ಭತ್ತದ ಕ್ಷೇತ್ರೋತ್ಸವ 9) ಎಂಬ್ರಾಯಿಡರಿ ತರಬೇತಿ 10) ರಾಮಸಾಗರ ಕಾಲುವೆ ಕಾಮಗಾರಿ 11) ಬಸವಣ್ಣ ಕಾಲುವೆ ಕಾಮಗಾರಿ


### ಪ್ರಾತ್ಯಕ್ಷಿಕೆಯಲ್ಲಿದ್ದ ದೇಸಿ ತಳಿಗಳ ವಿವರ

1) ಜೀರಿಗೆ ಸಣ್ಣ
2) ಕರಿಗಜಿವಿಲಿ
3) ಬಂಗಾರ ಸಣ್ಣ
4) ಗೌರಿ ಸಣ್ಣ
5) ಕಣ್ ರತ್ನಚೂಡಿ
6) ರತನ್‌ಸಾಗರ
7) ಹೆಚ್.ಎಂ.ಟಿ.
8) ಬರ್ಮಾ ಬ್ಲಾಕ್
9) ಅಂದನೂರು ಸಣ್ಣ
10) ಗಂಗಾವತಿ ಸಣ್ಣ
11) ಕೆಂಪು ಭತ್ತ
12) ಆಸಾನಲಿಯಾ
13) ಮಸೂರಿ
14) ರಾಯಚೂರು ಸಣ್ಣ
15) ಗಂಗಾಬಾಲಿ
16) ನಾರಿಕೇಳ
17) ಕಾಗೆಸಾಲಿ
18) ಅಂಬೆಮೋರ್
19) ಚಿನ್ನಪೊನ್ನಿ
20) ಆನಂದಿ
21) ಸಣ್ಣ ಭತ್ತ
22) ಜುಗಲ್
23) ಸಿದ್ದಸಣ್ಣ
24) ಮಂಜುಗುಣಿ
25) ಜಾಸ್ಮಿನ್ ಬ್ಲಾಕ್
26) ಎನ್.ಎಂ.ಎಸ್.2
27) ನವಿಲು ಸಾಲೆ
28) ಮಾಲ್ಗುಡಿ ಸಣ್ಣ
29) ಕಗ್ಗ ಸಾಲೆ
30) ಕಾಲಾಜೀರ
31) ಸಿಂಧೂರ ಮಧುಸಾಲೆ
32) ನವರ
33) ಜೀರಿಗೆ ಸಾಂಬಾ
34) ಸೇಲಂ ಸಣ್ಣ
35) ಕಾಮಧಾರಿ
36) ಕರಿ ಜಡ್ಡು
37) ಅಂತರ ಸಾಳೆ
38) ದೊಡ್ಡಿಗೆ
39) ಮುಗದ್ ಸಣ್ಣ
40) ಸುವಾಸನೆ ಭತ್ತ
41) ಕಾಗಿಸಾಲಿ
42) ಆಲೂರು ಸಣ್ಣ
43) ಗಂಧಸಾಲೆ
44) ರಾಜಮುಡಿ
45) ಮದ್ರಾಸ್ ಸಣ್ಣ
46) ಚಿಟ್ಟಿಮುತ್ಯಾಲು
47) ಅತಿಕರಿಯ
48) ಹಸೂಡಿ
49) ಕರೇಕಲ್ಲು
50) ಪ್ರೋಟೀನ್ ರೈಸ್
51) ಸುಂದರ ಸಾಳಿ
52) ರಾಂಗಲಿ
53) ಕಯಮೆ
54) ಜೋಳಗ
55) ಆಸಾನ ಚೂಡಿ
56) ಭಾಸುಮತಿ
57) ಪುಂಡರವಣಿಕಿ
58) ಗಿಡ್ಡಗೌರಿ

– ಜಿ.ಕೃಷ್ಣಪ್ರಸಾದ್, ತರಬೇತಿ ಸಂಯೋಜಕರು, ಸ್ಮೆಕ್ ಸಂಸ್ಥೆ



# ಬೆಳಕಿನ ಹಾದಿ



ಶ್ರೀ ಎಸ್.ಹೆಚ್. ಮಂಜಪ್ಪ
ಮುಖ್ಯ ಇಂಜಿನಿಯರ್
ತುಂಗಾಭದ್ರಾ ಅಣೆಕಟ್ಟು ಯೋಜನಾ ವಲಯ, ಮುನಿರಾಬಾದ್

ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಅನುದಾನದಲ್ಲಿ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯು ನಡೆಯುತ್ತಿದೆ. ಇದು ಕೇವಲ ಕಾಲುವೆಗಳನ್ನು ಲೈನಿಂಗ್ ಮಾಡುವುದು, ಅಣೆಕಟ್ಟುಗಳ ರಿಪೇರಿ, ತೂಬು, ರಸ್ತೆ ಇತ್ಯಾದಿ ರಚನೆಗಳ ಪುನರ್ ನಿರ್ಮಾಣ ಇತ್ಯಾದಿ ಚಟುವಟಿಕೆಗಳಿಗಷ್ಟೇ ಸೀಮಿತವಾಗಿಲ್ಲ. ನೀರಿನ ಸದ್ಬಳಕೆ, ಪರಿಣಾಮಕಾರಿ ಹಂಚಿಕೆ ಹಾಗೂ ಭವಿಷ್ಯಕ್ಕೆ ಶುದ್ಧ ನೀರಿನ ಲಭ್ಯತೆಯ ವಿಶಾಲ ತಳಹದಿ ಮತ್ತು ದೂರದೃಷ್ಟಿ ಹೊಂದಿದೆ. ಇದಕ್ಕೆ ಪೂರಕವಾಗಿ ಯೋಜನೆಯ ಚಟುವಟಿಕೆಗಳನ್ನು ವಿನ್ಯಾಸಗೊಳಿಸಲಾಗಿದೆ.

ಇತ್ತೀಚೆಗೆ ಎಡಿಬಿ ಬಿಡುಗಡೆ ಮಾಡಿರುವ **Asian Water Development Outlook 2020** ವರದಿಯಲ್ಲಿ ಹಲವು ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಮುಖ್ಯವಾಗಿ; ಏಷ್ಯಾದ 150 ಕೋಟಿಗೂ ಅಧಿಕ ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದೆ, ಮತ್ತು 60 ಕೋಟಿ ನಗರವಾಸಿ ಜನರು ಅಗತ್ಯ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇದನ್ನು ಗಮನದಲ್ಲಿಟ್ಟು ಕೊಂಡು ವರದಿಯಲ್ಲಿ ಹಲವು ಸುಸ್ಥಿರ ಅಂಶಗಳನ್ನು ಶಿಫಾರಸು ಮಾಡಲಾಗಿದೆ. ಮುಖ್ಯವಾದವುಗಳೆಂದರೆ;

- ನೀರು ಸುಸ್ಥಿರ ಗ್ರಾಮೀಣಾಭಿವೃದ್ಧಿಯ ಕೇಂದ್ರಬಿಂದುವಾಗಿರಲಿ, ನಗರ, ಸ್ಲಂಗಳು ಮತ್ತು ನಗರಕ್ಕೆ ಹೊಂದಿ ಕೊಂಡ ಪ್ರದೇಶಗಳಲ್ಲಿ ನೀರು, ನೈರ್ಮಲ್ಯ, ಪ್ರಕೃತಿ ವಿಕೋಪಗಳನ್ನು ತಗ್ಗಿಸುವ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು.
- ಪರಿಣಾಮಕಾರಿ ನೀರು ಬಳಕೆಯ ಕೃಷಿ, ಸಮುದಾಯ ಆಧಾರಿತ ನೀರು ಮತ್ತು ನೈರ್ಮಲ್ಯ ಸೇವೆಗಳಿಗೆ ಉತ್ತೇಜನ.
- ಮಹಿಳಾ ಕೇಂದ್ರಿತ ಕಾರ್ಯಕ್ರಮಗಳ ಅನುಸರಣೆ.
- ಮಾಲಿನ್ಯ ತಡೆಗಟ್ಟುವುದು, ಮಣ್ಣಿನ ಸಂರಕ್ಷಣೆಗೆ ಆದ್ಯತೆ
- ಜಲಸಂಬಂಧಿ ವಿಕೋಪಗಳನ್ನು ತಡೆಯಲು ಪರಿಣಾಮಕಾರಿ ನೀರು ನಿರ್ವಹಣಾ ಪದ್ಧತಿಗಳನ್ನು ಹೆಚ್ಚಿಸುವುದು.



ಕಾಳಘಟ್ಟ ಕಾಲುವೆ ಕಾಮಗಾರಿ

ಆರಂಭದಲ್ಲಿಯೇ ಹೇಳಿದಂತೆ ವಿಜಯನಗರ ಕಾಲುವೆಗಳ ಯೋಜನೆಯು ಮೇಲಿನ ಅಂಶಗಳಿಗೆ ಪೂರಕವಾಗಿಯೇ ಕಾರ್ಯ ನಿರ್ವಹಿಸುತ್ತಿದೆ ಎನ್ನಬಹುದು. ನಿಮ್ಮೆಲ್ಲರ ಸಹಕಾರದಿಂದ ಯೋಜನೆ ತನ್ನ ಉದ್ದೇಶ ಸಾಧನೆಯಲ್ಲಿ ಮಾದರಿಯಾಗಲಿ ಎಂದು ಆಶಿಸುತ್ತೇನೆ. ಪತ್ರಿಕೆಯು ಎಲ್ಲರಿಗೂ ತಲುಪಲಿ, ತಮ್ಮ ಸಲಹೆಗಳಿಗೆ ಸ್ವಾಗತ.

# ಸಂಘಗಳ ಸ್ವಾವಲಂಬನೆಗೆ ನಿಗಮ ಮತ್ತು ಕಾಡಾ ಸಮನ್ವಯತೆ


ವಿಜಯನಗರ ಎಡದಂಡೆ ಕಾಲುವೆಯ ನೀರು ಬಳಕೆದಾರರ ಸಹಕಾರ ಸಂಘಗಳು ಆಧುನೀಕರಣ ಯೋಜನೆಯಲ್ಲಿ ಕಾಮಗಾರಿ ಅನುಷ್ಠಾನ ಮತ್ತು ಯೋಜನಾ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದು, ಸಂಘಗಳನ್ನು ಸಹ ಪುನರುಜ್ಜೀವನಗೊಳಿಸಲಾಗುತ್ತಿದೆ, ಸಂಘಗಳ ಸುಸ್ಥಿರ ಅಭಿವೃದ್ಧಿಗೆ ಹಣಕಾಸಿನ ಸ್ವಾವಲಂಬನೆ ಅಗತ್ಯ. ನೀರಿನ ಕರ ವಸೂಲಾತಿಯು ಅದರಲ್ಲಿ ಪ್ರಮುಖವಾದ ಮೂಲ. ಇದನ್ನು ಮನಗಂಡು ಆನೆಗುಂದಿ, ಸಂಗಾಪುರ, ಶಿವಪುರ ಮತ್ತು ಬಂಡಿಹರ್ಲಾಪುರ ಸಂಘಗಳು ಕೊಪ್ಪಳ ಮತ್ತು ಗಂಗಾವತಿ ತಹಶೀಲ್ದಾರರವರಿಗೆ ನೀರಿನ ಕರ ವಸೂಲಾತಿ ಅಧಿಕಾರ ಹಸ್ತಾಂತರ ಮಾಡುವಂತೆ ಮಾರ್ಚ್ ಮತ್ತು ಜೂನ್ ತಿಂಗಳಿನಲ್ಲಿ ಮನವಿ ಪತ್ರ ನೀಡಿವೆ.

ಆದರೆ ಕೊಪ್ಪಳ ತಹಶೀಲ್ದಾರರು, ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಬಂಡಿಹರ್ಲಾಪುರ ಮತ್ತು ಶಿವಪುರ ಸಂಘದವರಿಗೆ 10 ಹಳ್ಳಿಗಳ ನೀರಿನಕರ ವಸೂಲಾತಿ ಜವಾಬ್ದಾರಿ ನೀಡಿದ್ದು, ಉಳಿದ 8 ಹಳ್ಳಿಗಳಿಗೆ ನೀರಾವರಿ ಕರ ವಸೂಲಿ ಯಾರು ಮಾಡಬೇಕೆಂದು ಸ್ಪಷ್ಟತೆ ನೀಡುವಂತೆ ಪತ್ರ ಬರೆದಿದ್ದಾರೆ. ಆದರೆ ಈಗಾಗಲೇ ಕೊಪ್ಪಳ ತಹಶೀಲ್ದಾರರಿಗೆ ಕಾರ್ಯಪಾಲಕ ಅಭಿಯಂತರರು, ಕೆ.ಎನ್.ಎನ್.ಎಲ್ ವಡ್ಡರಹಟ್ಟಿ ವಿಭಾಗದಿಂದ 'ಒಪ್ಪಂದ ಪತ್ರ' ಮಾಡಿಕೊಂಡ ಸಂಘಗಳಿಗೆ ಅಧಿಕಾರ ನೀಡಬಹುದೆಂದು ಪತ್ರ ಬರೆದರೂ ಈ ಗೊಂದಲ ಸೃಷ್ಟಿಸಿದ್ದಾರೆ. ಇದು ಒಂದೆಡೆಯಾದರೆ ಮತ್ತೊಂದೆಡೆ ಕಾರ್ಯಪಾಲಕ ಅಭಿಯಂತರರು, KNNL ವಡ್ಡರಹಟ್ಟಿ ವಿಭಾಗದಿಂದ ಬಂಡಿಹರ್ಲಾಪುರ ಸಂಘದವರಿಗೆರೂ, 2700 ಮತ್ತು ಆನೆಗುಂದಿ ಸಂಘದವರಿಗೆ ರೂ.79,245 ನೀರಿನ ಕರ ವಸೂಲಿ ಮಾಡುವಂತೆ ಡಿಮ್ಯಾಂಡ್ ನೋಟಿಸು ನೀಡಿದ್ದಾರೆ. ಇದೂ ಸಹ ಸಂಘದವರಲ್ಲಿ ಗೊಂದಲ ಉಂಟು ಮಾಡಿದೆ. ಸಂಘದವರು ತಹಶೀಲ್ದಾರರಿಂದ ನೀರಿನ ಕರ ವಸೂಲಾತಿ ಅಧಿಕಾರ ಹಸ್ತಾಂತರ ಮಾಡಿಕೊಳ್ಳದೇ ಯಾವ ರೀತಿಯಲ್ಲಿ ವಸೂಲಾತಿ ಮಾಡುವುದು ಎಂಬ ಪ್ರಶ್ನೆ ಉದ್ಭವಿಸಿದೆ.

ಆದ್ದರಿಂದ ಕರ್ನಾಟಕ ನೀರಾವರಿ ನಿಗಮದ ಮತ್ತು ತುಂಗಾಭದ್ರ ಕಾಡಾದವರು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸಂಘಗಳಿಗೆ ನೀರಿನ ಕರ ವಸೂಲಾತಿ ಅಧಿಕಾರ ದೊರಕಿಸಿ ಕೊಡುವುದು ತುರ್ತಾಗಿ ಆಗಬೇಕಿದೆ. ಕರ್ನಾಟಕ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ / ಅಧಿಕಾರಿಗಳು ಮತ್ತು ತುಂಗಭದ್ರಾ ಕಾಡಾ ಆಡಳಿತಾಧಿಕಾರಿಗಳು ಸಮನ್ವಯತೆಯಿಂದ ಈ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ.

– ವೀರೇಶ್, ಸಮುದಾಯ ಸಂಘಟಕರು, ಸ್ಮೆಕ್ ಸಂಸ್ಥೆ

# ಸುಸ್ಥಿರ ಕೃಷಿ ಸಮೃದ್ಧ ಸಂಚಿಕೆ



ಡಾ. ಶ್ರೀನಿವಾಸ ಮುದ್ರಕರ್ತ
ತಂಡದ ನಾಯಕರು, ಸ್ಮೆಕ್ ಇಂಡಿಯಾ

ಈ ಸಂಚಿಕೆಯನ್ನು ಗಮನಿಸಿದರೆ ಬಹುತೇಕ ಸುಸ್ಥಿರ ಕೃಷಿ ಚಟುವಟಿಕೆ ಮಾಹಿತಿಗಳೇ ಕಣ್ಣಿಗೆ ಬೀಳುತ್ತವೆ. ಅದು ಸಹಜವೂ ಹೌದು. ಏಕೆಂದರೆ ಸೆಪ್ಟೆಂಬರ್-ಅಕ್ಟೋಬರ್ ಅವಧಿಯಲ್ಲಿ ನೀರು ಬಿಡುಗಡೆ ಮಾಡಿದ ಕಾರಣ ಹೆಚ್ಚು ಸಿವಿಲ್ ಕಾಮಗಾರಿಗಳು ನಡೆಯಲಿಲ್ಲ. ಅಲ್ಲದೆ ಇದು ಮುಂಗಾರು ಹಂಗಾಮಿನ ಮಧ್ಯಭಾಗವಾದ್ದರಿಂದ ಯೋಜನೆಯಲ್ಲಿ ಕೃಷಿ ಚಟುವಟಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿತ್ತು. ಇದರ ಪ್ರತಿಫಲವಾಗಿಯೇ ಪ್ರಸ್ತುತ ಸಂಚಿಕೆಯ ಪುಟಗಳಲ್ಲಿ ಕೃಷಿಯ ಹಸಿರು ಉಕ್ಕುತ್ತಿದೆ ಎನ್ನಬಹುದು.

ನೀರಿನ ಉಳಿತಾಯ, ವ್ಯವಸಾಯದಲ್ಲಿ ವೆಚ್ಚ ಕಡಿತಗೊಳಿಸುವುದು ಹಾಗೂ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ವಿಷಮುಕ್ತ ಕೃಷಿಗೆ ಪ್ರೋತ್ಸಾಹ ನೀಡುವ ಉದ್ದೇಶ ನಮ್ಮ ಯೋಜನೆಯದ್ದಾಗಿದೆ. ಆ ನಿಟ್ಟಿನಲ್ಲಿ ದೇಸೀ ಬೀಜಗಳ ಬೆಳೆಯುವಿಕೆಗೆ ಪ್ರೇರಣೆ, ಹತ್ತಾರು ಸರಳ ಸಾವಯವ ಕೃಷಿ ವಿಧಾನಗಳ ಪರಿಚಯ ಹಾಗೂ ಪ್ರಾತ್ಯಕ್ಷಿಕೆಯನ್ನು ಈ ಹಂಗಾಮಿನಲ್ಲಿ ಅಳವಡಿಸಲಾಗಿತ್ತು. ಅದಕ್ಕೆ ರೈತರು ನೀಡಿದ ಪ್ರತಿಕ್ರಿಯೆ ಅದ್ಭುತವಾದದ್ದು. ಇವರ ಅನುಭವವನ್ನು ಬಲದಂಡೆಯ ನರಸಾಪುರ ಮತ್ತು ಎಡದಂಡೆಯ ಹೊಸಳ್ಳಿ ಗ್ರಾಮಗಳಲ್ಲಿ ಕ್ಷೇತ್ರೋತ್ಸವ ಏರ್ಪಡಿಸುವ ಮೂಲಕ ಇತರರಿಗೂ ಪರಿಚಯಿಸುವ ಪ್ರಯತ್ನ ಮಾಡಲಾಯಿತು. ಜೊತೆಗೆ ದೇಸೀ ಭತ್ತ ಬೆಳೆದ ರೈತ ದಂಪತಿಗಳಿಗೆ ಸನ್ಮಾನ ಮಾಡುವ ಮೂಲಕ ಶ್ಲಾಘಿಸಲಾಯಿತು. ಹಿಂಗಾರು ಹಂಗಾಮಿನಲ್ಲಿ ಈ ಎಲ್ಲಾ ಚಟುವಟಿಕೆಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮುಂದುವರಿ ಯುವ ಲಕ್ಷಣಗಳು ಕಾಣುತ್ತಿರುವುದು ನಮ್ಮ ಪ್ರಯತ್ನ ಯಶಸ್ವಿಯಾಗಿದೆ ಎಂಬುದರ ದ್ಯೋತಕ.

ಈ ಸಂಚಿಕೆಯ ಮತ್ತೊಂದು ಗಮನಾರ್ಹ ಸಂಗತಿ ಎಂದರೆ ಇಬ್ಬರು ಕೃಷಿಕರು ತಮ್ಮ ಅನುಭವವನ್ನು ಸ್ವತಃ ಬರೆದಿರುವುದು. ಹೊಸಳ್ಳಿಯ ಪರ್ವತಸ್ವಾಮಿ ಮತ್ತು ಪಂಪನ ಗೌಡ ಅವರು ಕ್ರಮವಾಗಿ ತಾವು ಸಾವಯವ ಕೃಷಿಯತ್ತ ಸಾಗಿದ ಮತ್ತು ಎರೆಹುಳು ಘಟಕ ಆರಂಭಿಸಿದ ಬಗ್ಗೆ ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಅದನ್ನು ಹೆಚ್ಚು ಬದಲಾಯಿಸದೆ ಇಲ್ಲಿ ನೀಡಲಾಗಿದೆ. ಓದುಗರಿಗೆ ಇದು ಇಷ್ಟವಾಗುತ್ತದೆ ಎಂಬ ವಿಶ್ವಾಸ ನಮ್ಮದು. ಇದೇ ರೀತಿ ಮುಂದಿನ ಸಂಚಿಕೆಗಳಿಗೂ ಸಹ ಕೃಷಿಕರು, ಹೆಣ್ಣುಮಕ್ಕಳು ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳ ಸದಸ್ಯರು ಬರಹದ ಕಾಣಿಕೆ ಸಲ್ಲಿಸಲಿ ಎಂದು ಆಶಿಸುತ್ತೇನೆ.

# ಗಮನ ಸೆಳೆಯುತ್ತಿರುವ ಸುಸ್ಥಿರ ಕೃಷಿ ಹೆಜ್ಜೆಗಳು



ಸರಳ ಎರೆಗೊಬ್ಬರ ಘಟಕ

ನೀರು ಬಳಕೆದಾರ ಸಹಕಾರ ಸಂಘಗಳನ್ನು ಬಲಪಡಿಸುವ ಚಟುವಟಿಕೆಗಳ ಭಾಗವಾಗಿ ಸ್ಮೆಕ್ ಸಂಸ್ಥೆಯು ಸುಸ್ಥಿರ ಕೃಷಿಯನ್ನು ಉತ್ತೇಜಿಸುತ್ತಿದೆ. ನೀರನ್ನು ಉಳಿಸುವ ಮತ್ತು ವೆಚ್ಚವನ್ನು ಕಡಿಮೆ ಮಾಡುವ ಸುಧಾರಿತ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಸಹಾಯ ಮಾಡುತ್ತಿದೆ. ಅದರ ಭಾಗವಾಗಿ ಬೆಳೆ ವೈವಿಧ್ಯತೆಯನ್ನು ಉತ್ತೇಜಿಸಿದೆ, ಬೀಜ, ಗೊಬ್ಬರಗಳ ಅವಲಂಬನೆ ಯನ್ನು ಕಡಿಮೆ ಮಾಡಿದೆ, ಈ ಉದ್ದೇಶ ಸಾಧಿಸಲು ಹಲವಾರು ಕೃಷಿ ತರಬೇತಿ ಕಾರ್ಯಕ್ರಮಗಳು, ಕ್ಷೇತ್ರ ಪ್ರದರ್ಶನಗಳು ಮತ್ತು ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗಿದೆ. ಈ ಅವಧಿ ಯಲ್ಲಿ ಅನೇಕ ಸುಸ್ಥಿರ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ಗಮನಾರ್ಹವಾದದ್ದು ಬೆಳೆ ಸಂರಕ್ಷಣೆ, ನೈಸರ್ಗಿಕ ಕೀಟ ಮತ್ತು ರೋಗ ನಿರ್ವಹಣೆ, ಸರಳ ಎರೆಗೊಬ್ಬರ ವಿಧಾನ ಗಳ ಪರಿಚಯ ಮತ್ತು ಕೈತೋಟ ನಿರ್ಮಾಣ.

ಅಚ್ಚುಕಟ್ಟು ಪ್ರದೇಶದ ರೈತರು ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಕಳೆನಾಶಕಗಳನ್ನು ಬಳಸುತ್ತಿದ್ದಾರೆ. ನೀರಿನ ಅತಿಯಾದ ಬಳಕೆಯು ಮಣ್ಣಿನ ಆರೋಗ್ಯದ ಮೇಲೂ ಪರಿಣಾಮ ಬೀರಿದೆ. ಇದನ್ನು ಗಮನ ದಲ್ಲಿಟ್ಟುಕೊಂಡು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಗಳಿಗೆ ಪರ್ಯಾಯಗಳನ್ನು ಅಭಿವೃದ್ಧಿಪಡಿಸಲು ಆದ್ಯತೆ ನೀಡಲಾ ಯಿತು. ಕಡಿಮೆ ವೆಚ್ಚದ ಎರೆಗೊಬ್ಬರ, ಘನ ಜೀವಾಮೃತ, ದ್ರವಜೀವಮೃತ, ಮೀನಿನ ಟಾನಿಕ್ ವಿಧಾನಗಳನ್ನು ಪರಿಚಯಿಸ ಲಾಯಿತು ಮತ್ತು ಈ ಸಾವಯವ ಗೊಬ್ಬರವನ್ನು ಉತ್ಪಾದಿಸಲು ರೈತರಿಗೆ ತರಬೇತಿ ನೀಡಲಾಯಿತು. ಜೀವಾಮೃತ ಮತ್ತು ವೇಸ್ಟ್ ಡಿಕಂಪೋಸರ್‌ಗಳಂತಹ ದ್ರವ ಗೊಬ್ಬರಗಳು ಜನಪ್ರಿಯತೆಯನ್ನು ಗಳಿಸಿದವು ಮತ್ತು ಅನೇಕ ರೈತರು ಅವುಗಳನ್ನು ನಿಯಮಿತವಾಗಿ ಬಳಸುತ್ತಿದ್ದಾರೆ. ಹಾನಿಕಾರಕ ರಾಸಾಯನಿಕ ಕೀಟನಾಶಕಗಳನ್ನು ಬದಲಿಸಲು ಪೂಚಿಮರಂದು ಜೈವಿಕ ಕೀಟನಾಶಕ ಪರಿಚಯಿಸ



ಸುಸ್ಥಿರ ಕಬ್ಬು ಅಧ್ಯಯನ ಪ್ರವಾಸ

ಲಾಗಿದೆ. ವಾಣಿಜ್ಯ ಉಪಯೋಗಕ್ಕಾಗಿ ಪೂಚಿಮರಂದು, ಜೀವಾಮೃತ ಮತ್ತು ಎರೆಗೊಬ್ಬರ ತಯಾರಿಸಲು ಮಹಿಳಾ ಉಪ ಸಮಿತಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

ಕಳೆದ ಮುಂಗಾರಿನಲ್ಲಿ 24 ರೈತರು ಶ್ರೀ ಭತ್ತದ ವಿಧಾನ ಅಳವಡಿಸಿಕೊಂಡಿದ್ದಾರೆ. ಹರಿಹರದ ಸಾವಯವ ಭತ್ತದ ತಾಕು, ಸಂಕೇಶ್ವರದ ಕಬ್ಬು ಸಂಶೋಧನಾ ಕೇಂದ್ರ, ಬಂಡ್ರಾಳದ ಎರೆಹುಳು ಘಟಕ, ರಾಮಸಾಗರದ ಬಾಳೆ ಉತ್ಪಾದನಾ ಘಟಕ ಮತ್ತು ಆನೆಗುಂದಿಯ ಬಾಳೆನಾರು ಘಟಕಕ್ಕೆ 12 ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗಿದೆ. ಸಾವಯವ ಕೃಷಿಯ ಜ್ಞಾನ ನೀಡಲು 19 ತರಬೇತಿ ಕಾರ್ಯಕ್ರಮಗಳು ಮತ್ತು 68 ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಪ್ರಯತ್ನಗಳಿಂದ ರಾಸಾಯನಿಕಗಳ ದುಷ್ಪರಿಣಾಮಗಳ ಬಗ್ಗೆ ಹೆಚ್ಚಿನ ಅರಿವು ಉಂಟಾಗಿ ಸಾವಯವ ಕೃಷಿ ಪದ್ಧತಿಗಳತ್ತ ಗಮನಾರ್ಹ ಏರಿಕೆ ಕಂಡು ಬಂದಿದೆ.


ಹತ್ತಿಯಲ್ಲಿ ಕೀಟ ನಿರ್ವಹಣೆ ತರಬೇತಿ, ಬಿಚ್ಚಾಲಿ


ಕೈತೋಟ ಪ್ರಾತ್ಯಕ್ಷಿಕೆ ವೀಕ್ಷಣೆ

**ಸುಸ್ಥಿರ ಕೃಷಿ ಪ್ರಾತ್ಯಕ್ಷಿಕೆಗಳ ಪಟ್ಟಿ**

| ಚಟುವಟಿಕೆ | ಪ್ರಾತ್ಯಕ್ಷಿಕೆ ಸಂಖ್ಯೆ | ಪುರುಷ | ಮಹಿಳೆ | ಒಟ್ಟು |
|---|---|---|---|---|
| 1) 'ಶ್ರೀ' ಮತ್ತು ನೇರ ಭತ್ತ ಬಿತ್ತನೆ ವಿಧಾನ | 17 | 59 | 57 | 116 |
| 2) ಘನ ಜೀವಾಮೃತ | 4 | 9 | 2 | 11 |
| 3) ಜೀವಾಮೃತ | 12 | 32 | 28 | 60 |
| 4) ವೇಸ್ಟ್ ಡೀಕಂಪೋಸರ್ | 11 | 22 | 16 | 38 |
| 5) ಪೂಚಿಮರಂದು | 9 | 37 | 6 | 43 |
| 6) ಸರಳ ಎರೆಗೊಬ್ಬರ | 8 | 33 | 0 | 33 |
| 7) ಗುಳಿ ರಾಗಿ | 1 | 4 | 6 | 10 |
| 8) ಕೈ ತೋಟ | 5 | 9 | 9 | 18 |
| 9) ಮೀನಿನ ಟಾನಿಕ್ | 1 | 3 | 12 | 15 |
| ಒಟ್ಟು | **68** | **208** | **136** | **344** |

– ಜಿ.ಕೃಷ್ಣಪ್ರಸಾದ್, ತರಬೇತಿ ಸಂಯೋಜಕರು, ಸ್ಮೈಕ್ ಸಂಸ್ಥೆ

## ಬದಲಾವಣೆಯತ್ತ ಹೆಜ್ಜೆ

ನಾಗೇನಹಳ್ಳಿಯ ಬಿ.ಚಂದ್ರಶೇಖರ್ 35 ಎಕರೆ ಭೂಮಿ ಹೊಂದಿದ್ದಾರೆ. ಕಾಳಘಟ್ಟ ಕಾಲುವೆ ಪ್ರದೇಶದ ವ್ಯಾಪ್ತಿಗೆ ಬರುವ ಇವರ ಮುಖ್ಯ ಬೆಳೆ ಭತ್ತ ಮತ್ತು ಕಬ್ಬು. ಹಲವು ವರ್ಷಗಳಿಂದ ರಾಸಾಯನಿಕ ಕೃಷಿ ಅಳವಡಿಸಿಕೊಂಡಿದ್ದು, ಬಾಹ್ಯ ಒಳಸುರಿಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದಾರೆ. ಯೋಜನಾ ಸಹಾಯ ಸಂಸ್ಥೆಯು ನಾಗೇನಹಳ್ಳಿಯಲ್ಲಿ ಸಾವಯವ ಕೃಷಿ ತರಬೇತಿ ಕಾರ್ಯಕ್ರಮ ಆಯೋಜಿಸಿ ಸುಸ್ಥಿರ ಕೃಷಿ ವಿಧಾನ ಅಳವಡಿಸಿಕೊಳ್ಳಲು ರೈತರಿಗೆ ವಿನಂತಿಸಿದಾಗ, ಚಂದ್ರಶೇಖರ್ ಮೊದಲಿಗರಾಗಿ ಒಪ್ಪಿ ಕೊಂಡರು. ಅಲ್ಲದೆ ಈ ಪ್ರಯೋಗವನ್ನು ಕೈಗೊಳ್ಳುವಂತೆ ಇತರ ರೈತರಿಗೆ ಮನವರಿಕೆ ಮಾಡಿಕೊಟ್ಟರು. ಇದರ ಪರಿಣಾಮವಾಗಿ 10 ರೈತರು ವಿವಿಧ ಸುಸ್ಥಿರ ಕೃಷಿ ವಿಧಾನವನ್ನು ಅಳವಡಿಸಿ ಕೊಳ್ಳಲು ಒಪ್ಪಿದ್ದು ವಿಶೇಷ.

ಯೋಜನಾ ಮಾರ್ಗದರ್ಶನದಲ್ಲಿ ಮೂರು ಸುಸ್ಥಿರ ಕೃಷಿ ಚಟುವಟಿಕೆಗಳನ್ನು ಚಂದ್ರಶೇಖರ್ ಅಳವಡಿಸಿಕೊಂಡಿದ್ದಾರೆ. 1) ಸಾಂಪ್ರದಾಯಿಕ ತಳಿಯಾದ ಬಂಗಾರಕಡ್ಡಿ ಭತ್ತವನ್ನು ಸಾವ ಯವ ವಿಧಾನದಲ್ಲೇ ಬೆಳೆದು ಉತ್ತಮ ಇಳುವರಿ ಪಡೆದಿದ್ದಾರೆ. 2) ಮೂರು ಎಕರೆಯಲ್ಲಿ ಗುಳಿಪದ್ಧತಿಯಲ್ಲಿ ರಾಗಿ ಬೆಳೆದಿದ್ದು, ಇದೇ ಮೊದಲ ಬಾರಿಗೆ ಈ ವಿಧಾನವನ್ನು ವಿಜಯನಗರ ಅಚ್ಚುಕಟ್ಟು ವ್ಯಾಪ್ತಿಗೆ ಪರಿಚಯಿಸಿದ ಹೆಮ್ಮೆ ಇವರದು. 3) ಬಹು ಮುಖ್ಯವಾಗಿ 2 ಎಕರೆಯಲ್ಲಿ ಒಂದೇ ಕಣ್ಣಿನ ಕಬ್ಬಿನ ಕೃಷಿಯನ್ನು ಅಳವಡಿಸಿಕೊಂಡಿದ್ದು, ಈ ನಿಟ್ಟಿನಲ್ಲಿ ರೈತರನ್ನು ಸಜ್ಜುಗೊಳಿಸು ವಲ್ಲಿ ಚಂದ್ರಶೇಖರ್ ಪ್ರಮುಖ ಪಾತ್ರ ವಹಿಸಿದ್ದಾರೆ. ಜೊತೆಗೆ 'ಸಾವಯವ ಕಬ್ಬು ಬೆಳೆಗಾರರ ಸಂಘ' ರಚಿಸಲು ಮುಂದಾಗಿರು ವುದು ಹಾಗೂ ಸಾವಯವ ವಿಧಾನದಲ್ಲಿ ಬೆಲ್ಲ ತಯಾರಿಸಲು ಸಿದ್ಧತೆ ನಡೆಸಿರುವುದು ಇವರ ವಿಶೇಷ.



# ಕಾಲುವೆಯ ದಂಡೆಗಳ ಭದ್ರತೆಗೆ ಮೇವಿನ ಬೆಳೆ



ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಡಿ ಮುಖ್ಯ ಕಾಲುವೆಗಳಿಗೆ ಸಿಮೆಂಟ್ ಲೈನಿಂಗ್ ಮಾಡಲಾಗುತ್ತದೆ. ಈಗಾಗಲೇ ದೇಶನೂರು, ರಾಯ, ಬೆಲ್ಲಾ, ಹುಲಿಗಿ ಮುಂತಾದ ಕಾಲುವೆಗಳಲ್ಲಿ ಕಮಾಗಾರಿಗಳು ಸ್ವಲ್ಪ ಪ್ರಮಾಣದಲ್ಲಿ ನಡೆದಿದೆ. ಆಧುನೀಕರಣ ನಡೆದ ರಾಯ ಕಾಲುವೆಯ ಬದಿಗಳಲ್ಲಿ ಹೊಸಪೇಟೆಗೆ ಸೇರಿದ ಕೆಲವು ರೈತರು ಹುಲ್ಲು ಬೆಳೆದಿದ್ದಾರೆ. ಇದರಿಂದ ಎರಡು ರೀತಿಯ ಉಪಯೋಗ. 1) ಕಾಲುವೆ ಬದುಗಳಲ್ಲಿ ಮಣ್ಣು ಕುಸಿಯದಂತೆ ತಡೆದಿದ್ದಾರೆ. 2) ತಮ್ಮ ಜಾನುವಾರುಗಳಿಗೆ ಸುಲಭವಾಗಿ ಮೇವಿನ ಲಭ್ಯತೆ.

ರಾಯ ಮುಖ್ಯ ಕಾಲುವೆಯಲ್ಲಿ 1ನೇ ಕಿ.ಮೀ.ನ ಆಸುಪಾಸಿನಲ್ಲಿ ಪರಶುರಾಮ ಎಂಬ ರೈತ ಮತ್ತು ಅವರ ಸಂಗಡಿಗರು ಸೇರಿ ಸುಮಾರು 200ರಿಂದ 300 ಮೀ.ನಷ್ಟು ಉದ್ದಕ್ಕೆ ಕಾಲುವೆಯ ಎರಡೂ ಬದಿಗಳಲ್ಲಿ ಗಿನಿಗ್ರಾಸ್ ಮತ್ತು ನೇಪಿಯರ್ ತಳಿಯ ಹುಲ್ಲುಗಳನ್ನು ಬೆಳೆದಿದ್ದಾರೆ. ಜುಲೈ ತಿಂಗಳಿನಲ್ಲಿ ಬೇರು ನಾಟಿದ್ದು ನವಂಬರ್ 2020ರ ಹೊತ್ತಿಗೆ ಹುಲ್ಲು ಸಮೃದ್ಧವಾಗಿ ಬೆಳೆದಿದೆ.

ಇದು ಮಳೆ ಬಂದಾಗ ಕಾಲುವೆ ಬದಿಗಳು ಕುಸಿಯದಂತೆ ಕಾಪಾಡುತ್ತಿದೆ. ಅಲ್ಲದೆ, ರೈತರ ಜಾನುವಾರುಗಳಿಗೆ ಬೇಕಾದ ಮೇವನ್ನು ಒದಗಿಸುತ್ತದೆ. ರೈತರು ಮೇವಿನ ಅವಶ್ಯಕತೆ ಅನುಗುಣವಾಗಿ ಕಟಾವು ಮಾಡುವುದರಿಂದ ಹುಲ್ಲಿನ ಬೇರುಗಳು ನೆಲದಲ್ಲೇ ಇದ್ದು ಮಣ್ಣಿನ ಸವಕಳಿಯನ್ನು ತಡೆಯುತ್ತವೆ.

ಸ್ಥಳೀಯವಾಗಿ ಇದೊಂದು ರೈತರು ಪರಿಚಯಿಸಿದ ಉತ್ತಮ ವಿಧಾನವಾಗಿದೆ. ಇಂತಹ ಇಳಿಜಾರಿನಿಂದ ಕೂಡಿದ ಎತ್ತರದ ದಂಡೆಗಳು ಇರುವ ಇತರೇ ಕಾಲುವೆಗಳುದ್ದಕ್ಕೂ ಈ ವಿಧಾನಗಳನ್ನು ಅಳವಡಿಸಿಕೊಂಡಲ್ಲಿ ಆಧುನೀಕರಣಗೊಂಡ ಕಾಲುವೆಗಳಲ್ಲಿ ಹೂಳು ತುಂಬುವುದನ್ನು ತಡೆಯಬಹುದಾಗಿದೆ. ಈ ನಿಟ್ಟಿನಲ್ಲಿ ವಿಜಯನಗರದ ವಿವಿಧ ಕಾಲುವೆಗಳ ಅಚ್ಚುಕಟ್ಟು ಪ್ರದೇಶದಲ್ಲಿನ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಡೆಸುವುದರಿಂದ ಈ ಪದ್ಧತಿಯನ್ನು ಇತರೆಡೆಗೂ ಹರಡಿ ವ್ಯಾಪಕಗೊಳಿಸುವಂತೆ ಮಾಡಬಹುದಾಗಿದೆ.

– ಬಾಲಕೃಷ್ಣರಾಜ್ ನೀರ್ಚಾಲ್
ತರಬೇತಿ ಸಂಯೋಕರು, ಸ್ಮೆಕ್ ಸಂಸ್ಥೆ





# ಫಲ ಕೊಡುತ್ತಿರುವ ಹೊಲಿಗೆ ಕೌಶಲ್ಯ ತರಬೇತಿಗಳು


ಸಂಗೀತ, ಹೊಸಳ್ಳಿ

ವಿಜಯನಗರ ಕಾಲುವೆಗಳ ಆಧುನಿಕರಣ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಮುಖ್ಯವಾಗಿದ್ದು. ಗಂಗಾವತಿ ಎಡದಂಡೆ ಕಾಲುವೆಗೆ ಬರುವ 6 ಗ್ರಾಮಗಳಲ್ಲಿ ಮಹಿಳೆಯರ ಉಪಸಮಿತಿ ರಚಿಸಲಾಗಿದ್ದು 4 ಜೀವನೋಪಾಯ ಚಟುವಟಿಕೆಗಳನ್ನು ಈ ಉಪಸಮಿತಿಗಳು ಅನುಷ್ಠಾನಗೊಳಿಸುತ್ತಿವೆ. 105 ಮಹಿಳೆಯರು ತರಬೇತಿ ಪಡೆದಿರುತ್ತಾರೆ. ಹೊಲಿಗೆ ತರಬೇತಿ 2 ಗ್ರಾಮಗಳಿಂದ 42 ಜನ ಮಹಿಳೆಯರು, 2 ಗ್ರಾಮಗಳಿಂದ ಎಂಬ್ರಾಯಿಡರಿ ತರಬೇತಿ 37 ಜನ ಮಹಿಳೆಯರು. ಅಣಬೆ ಬೇಸಾಯ 13 ಜನ ಮಹಿಳೆಯರು, ಸೋಪು ತಯಾರಿಕೆ 14 ಜನ ಮಹಿಳೆಯರು ನುರಿತ ಸಂಪನ್ಮೂಲ ವ್ಯಕ್ತಿಯಿಂದ ತರಬೇತಿ ಪಡೆದಿರುತ್ತಾರೆ.

**ತರಬೇತಿ ಪಡೆದಿರುವರರ ಮಹಿಳೆಯರ ಅಂಕಿ-ಸಂಖ್ಯೆ**

| ಕಾಲುವೆ | ಗ್ರಾಮ | ತರಬೇತಿ ಹೆಸರು | ಒಟ್ಟು | ಪ.ಜಾತಿ | ಪ.ಪಂ. | ಜಮೀನುಳ್ಳವರು | ಭೂರಹಿತರು |
|---|---|---|---|---|---|---|---|
| ಶಿವಪುರ | ಶಿವಪುರ | ಎಂಬ್ರಾಯಿಡರಿ | 20 | 0 | 4 | 12 | 8 |
| | ಶಿವಪುರ | ಅಣಬೆ ಬೇಸಾಯ | 4 | 0 | 0 | 4 | 0 |
| ಗಂಗಾವತಿ ಮೇಲ್ದಂಡೆ | ಹೊಸಳ್ಳಿ | ಎಂಬ್ರಾಯಿಡರಿ | 17 | 0 | 0 | 5 | 12 |
| ಗಂಗಾವತಿ ಕೆಳದಂಡೆ | ಅಯೋಧ್ಯಾ | ಸೋಪು ತಯಾರಿಕೆ | 13 | 6 | 0 | 8 | 5 |
| ಹುಲಿಗಿ | ಹುಲಿಗಿ | ಅಣಬೆ ಬೇಸಾಯ | 9 | 0 | 0 | 0 | 9 |
| ಶಿವಪುರ | ಬಂಡಿಹರ್ಲಾಪುರ | ಹೊಲಿಗೆ ತರಬೇತಿ | 21 | 20 | 0 | 12 | 9 |
| | ಸಂಗಾಪುರ | ಹೊಲಿಗೆ ತರಬೇತಿ | 21 | 9 | 0 | 12 | 9 |
| | | ಒಟ್ಟು | **105** | **35** | **4** | **53** | **52** |

**ತೊಡಗಿಸಿಗೊಂಡ ಗುಂಪು ಚಟುವಟಿಕೆಗಳು**

1) ಸಂಗಾಪುರ ಗ್ರಾಮದ 7 ಜನ ಮಹಿಳೆಯರ ಮನೆಯಲ್ಲಿ ಹೊಲಿಗೆಯಂತ್ರಗಳಿದ್ದು. ಅವರು ತಮ್ಮ ಕುಟುಂಬದ ಸದಸ್ಯರ ಬಟ್ಟೆಗಳಲ್ಲದೆ ಗ್ರಾಹಕರಿಗೆ ಬ್ಲೌಸ್, ಲಂಗ, ಚೂಡಿದಾರ, ಮಕ್ಕಳ ಸ್ಕೂಲ್ ಯೂನಿಫಾರಂಗಳನ್ನು ಹೊಲೆದು ತಿಂಗಳಲ್ಲಿ 500 ರಿಂದ 1000 ರೂ. ಸಂಪಾದಿಸುತ್ತಿದ್ದಾರೆ. ಒಂದೇ ಕಡೆ ಎಲ್ಲರೂ ಮಿಷಿನ್ ಹಾಕಿಕೊಂಡು ಮಿನಿ ಗಾರ್ಮೆಂಟ್ಸ್ ಮಾಡಬೇಕೆಂದು ಖಾಲಿ ಕೊಠಡಿ ಹುಡುತ್ತಿದ್ದಾರೆ.

2) ಶಿವಪುರ ಗ್ರಾಮದಲ್ಲಿ ಎಂಬ್ರಾಯಿಡರಿ ಕಲಿತ 20 ಮಹಿಳೆಯರಲ್ಲಿ ಎಲ್ಲರೂ ಮನೆಯಲ್ಲಿ ತಮ್ಮ ಕುಟುಂಬದ ಸದಸ್ಯರ ಬ್ಲೌಜ್, ಡ್ರಸ್‌ಗಳಿಗೆ ಡಿಸೈನ್ ಮಾಡಿ ಕಸೂತಿ ಹಾಕಿಕೂಂಡಿರುತ್ತಾರೆ. ಅದರಲ್ಲಿ 4 ಜನ ಮಹಿಳೆಯರು ಗುಂಪು ಚಟುವಟಿಕೆ ಮಾಡಲು ಈರಮ್ಮನವರ ಮನೆ ಆವರಣದಲ್ಲಿ ಕಸೂತಿ ಕೆಲಸ ಪ್ರಾರಂಭಿಸಿದ್ದಾರೆ. ಇನ್ನೂ ಆದಾಯ ಬಂದಿರುವುದಿಲ್ಲ. ಆದರೆ ತಾವೇ ಹೊಲೆಯುವುದರಿಂದ ಖರ್ಚು ಕಡಿಮೆಯಾಗಿದೆ. ಇದೇ ಗ್ರಾಮದ 4 ಜನ ಅಣಬೆ ತರಬೇತಿ ಪಡೆದಿದ್ದು ಈಗ ಅಣಬೆ ಬೆಳೆಯಲು ಬೀಜ ಸಂಗ್ರಹಿಸುವ ಕಾರ್ಯದಲ್ಲಿದ್ದಾರೆ.


ಎಂಬ್ರಾಯಿಡರಿ ಕಲಿಕೆ, ಹೊಸಳ್ಳಿ ಉಪಸಮಿತಿ

3) ಅಯೋಧ್ಯ ಗ್ರಾಮದ 13 ಜನ ಮಹಿಳೆಯರು ಸೋಪು ತಯಾರಿಕೆ ಮಾಡಲು ತರಬೇತಿ ಪಡೆದಿದ್ದಾರೆ. ಅವರಲ್ಲಿ 5 ಜನ ಗುಂಪು ಚಟುವಟಿಕೆ ಮೂಲಕ ಸೋಪು ತಯಾರಿಕೆ ಮಾಡಲು ಮುಂದೆ ಬಂದಿದ್ದು ಅಚ್ಚು ಹಾಗೂ ಇತರೆ ಸಾಮಗ್ರಿಗಳ ಖರೀದಿಗೆ ಸಿದ್ದತೆ ಮಾಡಿಸಿಕೊಂಡಿರುತ್ತಾರೆ.

4) ಹೊಸಳ್ಳಿ ಗ್ರಾಮದ 17 ಜನ ಎಂಬ್ರಾಯಿಡರಿ ತರಬೇತಿ ಪಡೆದ ಮಹಿಳೆಯರು ತಮ್ಮ ಬಟ್ಟೆ ಡಿಸೈನ್ ಮಾಡಿಕೊಂಡು ಖರ್ಚು ಕಡಿಮೆ ಮಾಡಿಕೂಂಡಿದ್ದಾರೆ. ಜೊತೆಗೆ ಮುಂದಿನ ದಿನಗಳಲ್ಲಿ ಗುಂಪು ಚಟುವಟಿಕೆ ಮಾಡಲು ತೀರ್ಮಾನ ಕೈಗೊಂಡಿದ್ದೇವೆ.

5) ಬಂಡಿ ಹರ್ಲಾಪುರ ಗ್ರಾಮದ 7 ಜನ ಮಹಿಳೆಯರು ಹೊಲಿಗೆ ಮಿಷನ್ ಬಾಡಿಗೆ ಪಡೆದು ಬಟ್ಟೆ ಹೊಲಿಯುತ್ತಿದ್ದು, ಸ್ನೇಕ್ ಸಂಸ್ಥೆ ಕಡೆಯಿಂದ ಹೊಲಿಗೆ ಮಿಷನ್ ಒದಗಿಸಿಕೊಟ್ಟರೆ ಗ್ರಾಮದಲ್ಲಿ ಗುಂಪು ಚಟುವಟಿಕೆ ಮಾಡಲು ತೀರ್ಮಾನಿಸಿರುತ್ತಾರೆ.

6) ಹುಲಿಗಿ ಗ್ರಾಮದ 10 ಜನ ಮಹಿಳೆಯರು ಸೇರಿ ಅಣಬೆ ಉತ್ಪಾದನೆ ಮಾಡಲು ಸಕಲ ಸಿದ್ಧತೆ ನಡೆಸಿದ್ದಾರೆ.

– **ಲತಾ ಆರ್.**, ಸಮುದಾಯ ಸಂಘಟಕರು, ಸ್ನೇಕ್ ಸಂಸ್ಥೆ


# ದೇಸಿ ಭತ್ತದ ತಳಿ ಬೆಳೆದ ಕಥೆ

(ಸಾವಯವ ವಿಧಾನದಲ್ಲಿ ಮೊದಲ ಬಾರಿಗೆ ಭತ್ತ ಬೆಳೆದ ರೈತರೊಬ್ಬರು ತಮ್ಮ ಪಯಣದ ಕಥೆಯನ್ನು ಇಲ್ಲಿ ತಾವೇ ನಿರೂಪಿಸಿದ್ದಾರೆ. ಈ ಅನುಭವ ಕಥನ ಇನ್ನಷ್ಟು ರೈತರಿಗೆ ಪ್ರೇರಣೆಯಾಗಲಿ ಎಂಬುದು ನಮ್ಮ ಹಾರೈಕೆ. – ಸಂ.)

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಲ್ಲಿ ಸ್ಮೆಕ್ ಸಂಸ್ಥೆಯ ಅಧಿಕಾರಿಗಳಾದ ಶ್ರೀ ವೀರೇಶ್ ಮತ್ತು ನಿಂಗಯ್ಯರವರು ನಮ್ಮ ಗ್ರಾಮಕ್ಕೆ ಬಂದು ಸಾವಯವ ಕೃಷಿ ಕುರಿತು ಮಾತಾನಾಡುತ್ತಿದ್ದರು. ಅದೇ ಸಮಯಕ್ಕೆ ನಾನು ಅವರ ಬಳಿ ಹೋದೆ. ಆಗ ಅವರು ನಿಮ್ಮ ಗ್ರಾಮದಲ್ಲಿ ಆಸಕ್ತ ರೈತರು ಸಾವಯವದಲ್ಲಿ ಭತ್ತ ಬೆಳೆಯಿರಿ ಎಂದು ಹೇಳಲು ಪ್ರಾರಂಭಿಸಿದರು. ಆಗ ನಾನು, ಅವರಿಗೆ ಸಾವಯವದಲ್ಲಿ ಭತ್ತ ಎಷ್ಟು ಚೀಲ ಇಳುವರಿ ಪಡೆಯಬಹುದು ಎಂದು ಪ್ರಶ್ನೆ ಮಾಡಿದೆ. ಎಕರೆಗೆ 15ರಿಂದ 20 ಚೀಲ ಪಡೆಯಬಹುದು ಅಂತ ಹೇಳಿದರು. ಆಗ ನಾನು ಇಷ್ಟು ಕಡಿಮೆ ಇಳುವರಿ ಪಡೆದು ಸಾವಯವ ಕೃಷಿಯ ಬದಲು ರಾಸಾಯನಿಕ ಕೃಷಿಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ಇನ್ನೂ ಏನಾದರೂ ಅವಿಷ್ಕಾರಗಳು ಇದ್ದರೆ ಹೇಳಿ ಅಂತ ಕೇಳಿದೆ. ಆಗ ಅವರು ದೇಶಿಯ ಭತ್ತ ಅನೇಕ ಔಷಧಿಯ ಗುಣ ಹೊಂದಿದೆ ಅಂತ ಹೇಳಲು ಆರಂಭಿಸಿದ್ದರು. ಆಗ ನಾನು ನನಗೆ ಬೇರೆ ಕೆಲಸ ಇದೆ ಎಂದು ಹೇಳಿ ಹೊರಟುಬಿಟ್ಟೆ.

ನಂತರ ನಮ್ಮೂರಿನ ಶಂಕರೆಗೌಡ್ರು ತಮ್ಮ ಜಮೀನಿನಲ್ಲಿ ನೇರ ಕೂರಿಗೆ ಬಿತ್ತನೆ ಮಾಡಲು ನಿರ್ಧರಿಸಿರುವುದಾಗಿ ತಿಳಿಸಿದರು, ಆದೇ ಸಮಯಕ್ಕೆ ನಿಂಗಯ್ಯ ಅವರು ಸಣ್ಣ ಪ್ರಮಾಣದಲ್ಲಿ ಭತ್ತ ಬೆಳೆಯಿರಿ ಅಂತ ನನಗೆ ಹೇಳಿದರು. ಒಲ್ಲದ ಮನಸ್ಸಿನಿಂದ ಒಪ್ಪಿದೆ. ನಂತರ ಕೃಷಿ ವಿಜ್ಞಾನ ಕೇಂದ್ರದಲ್ಲಿ 'ಶ್ರೀ' ಪದ್ಧತಿ ಮತ್ತು ಕೂರಿಗೆ ಬಿತ್ತನೆ ಕುರಿತು ತರಬೇತಿಗೆ ನಮ್ಮ ಗ್ರಾಮದಿಂದ 6 ಜನ ರೈತರು ಹೋದೆವು.

ಕೃಷಿ ಸಂಶೋಧನಾ ಕೇಂದ್ರದ ಪ್ರಧಾನ ವಿಜ್ಞಾನಿ ಡಾ.ಬಿ.ಜಿ.ಮಸ್ತಾನರೆಡ್ಡಿಯವರು ರಾಸಾಯನಿಕದಿಂದಾಗುವ ದುಷ್ಪರಿಣಾಮಗಳ ಕುರಿತು ಮಾತಾನಾಡಿದರು. ಆಗ ನನ್ನ ಕುಟುಂಬದ ಮಟ್ಟಿಗಾದರೂ ರಾಸಾಯನಿಕ ಮುಕ್ತ ಕೃಷಿ ಪ್ರಾರಂಭಿಸಬೇಕು ಅಂತ ಮನಸ್ಸು ಮಾಡಿದೆ. ಸಣ್ಣ ಪ್ರಮಾಣದಲ್ಲಿ ಸಾವಯವದತ್ತ ಸಾಗೋಣ ಅಂತ ತೀರ್ಮಾನಿಸಿದೆ.


ಭತ್ತದ ಬೆಳವಣಿಗೆ ಹಂತ


ಆರಂಭದ ಗುಂಪು ಸಭೆ

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಸೀಗೆಬಾಗಿ ಗ್ರಾಮದ ಕೃಷಿಕರಾದ ಶಾಂತಪ್ಪ ತಮ್ಮ ಗದ್ದೆಯಲ್ಲಿ ಹಲವು ವರ್ಷಗಳಿಂದ ಶ್ರೀ ಪದ್ಧತಿಯಲ್ಲಿ 'ಸಿದ್ಧಸಣ್ಣ' ಎಂಬ ಭತ್ತವನ್ನು ಹಲವು ವರ್ಷಗಳಿಂದ ಬೆಳೆಯುತ್ತಾ ಬಂದಿರುವ ತಮ್ಮ ಅನುಭವ ಹಂಚಿಕೊಂಡರು. ಆಗ ನಾನು ಸಹ ಸಾವಯವದಲ್ಲಿ 20 ಗುಂಟೆ ಮಾಡೋಣ ಅಂತ ನಿರ್ಧಾರ ಮಾಡಿಯೇ ಬಿಟ್ಟೆ.

ನಂತರದ ದಿನಗಳಲ್ಲಿ ಹೊಸದಾಗಿ ಸಾವಯವ ಕೃಷಿ ಮಾಡುವ ರೈತರನ್ನು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಕುಂಬಳೂರ ಗ್ರಾಮದ ಪ್ರಗತಿಪರ ಕೃಷಿಕರಾದ ಆಂಜನೇಯ ಅವರ ಬಳಿ ಅಧ್ಯಯನ ಪ್ರವಾಸ ಹೋದೆವು. ನಮ್ಮ ಊರಿನಿಂದ ಒಟ್ಟು ಏಳು ಜನ ಕೃಷಿಕರು ಸಿದ್ಧರಾದೆವು. ಆಂಜನೇಯ ಅವರು ಸಂಗ್ರಹಿಸಿದ ಹಲವಾರು ದೇಸಿ ಭತ್ತದ ತಳಿಯ ಪರಿಚಯ ಮಾಡಿಸಿದ್ದರು. ಸಿದ್ಧಸಣ್ಣ, ಅಂದನೂರು ಸಣ್ಣ ನೋಡಲು ಸೋನಮಸೂರಿಯನ್ನೇ ಹೋಲುತ್ತಿತ್ತು. ನಂತರ ಹೆಚ್.ಎಂ.ಟಿ. ಆಯ್ಕೆ ಮಾಡಿಕೊಂಡೆ. ಈ ಮೂರು ತಳಿಗಳು ಸಣ್ಣ ಕಾಳಿನದ್ದಾಗಿತ್ತು. ನಂತರ ಔಷಧಿ ಗುಣವುಳ್ಳ ನವರ ಮತ್ತು ಭರ್ಮ ಬ್ಲಾಕ್ ಹೀಗೆ ಐದು ತಳಿಗಳನ್ನು ಆಯ್ಕೆ ಮಾಡಿಕೊಂಡೆವು. ನಾನು ಅಂದನೂರು ಸಣ್ಣ ಆಯ್ಕೆ ಮಾಡಿಕೊಂಡೆ. ಶಂಕರಗೌಡ ಮತ್ತು ಚಂದ್ರಗೌಡರಿಗೆ ಸಿದ್ದ ಸಣ್ಣ, ಕೆ.ಹನುಮೇಶ ಇವರಿಗೆ ಹೆಚ್.ಎಮ್.ಟಿ., ಪಂಪನಗೌಡ ಇವರಿಗೆ ಬರ್ಮಾ ಬ್ಲಾಕ್ ಮತ್ತು ನವರ, ದೇವೇಂದ್ರರವರಿಗೆ ಬರ್ಮಾ ಬ್ಲಾಕ್, ಸೋಮರಾಜ್ ಅಂದನೂರು ಸಣ್ಣತಳಿ ಹಾಕಲು ಆಯ್ಕೆ ಮಾಡಿಕೊಂಡೆವು.

ಅಂದಿನಿಂದ ನಮ್ಮ ಸಾವಯವ ಕೃಷಿಯ ಕೆಲಸ ಶುರುವಾಯಿತು. ಅತೀ ಹೆಚ್ಚು ಮಳೆಯಾದ ಕಾರಣ ನಮ್ಮ ಹೊಲದಲ್ಲಿ ಹಸಿರೆಲೆಗೊಬ್ಬರ (ಪಿಳ್ಳೆ ಪಿಸಿರು) ಸುಮಾರು 3ಅಡಿಗಿಂತ ಹೆಚ್ಚು ಬೆಳೆದಿತ್ತು. ಅದು ಅಲ್ಲದೆ ನಮ್ಮಲ್ಲಿ ಕೊಟ್ಟಿಗೆ ಗೊಬ್ಬರ ಸಾಕಷ್ಟು ಇತ್ತು. ಸುಮಾರು 4 ಟನ್‌ನಷ್ಟು ಗೊಬ್ಬರ ನನ್ನ ಜಮೀನಿಗೆ ಹೇರಿದ್ದೆವು. ನಂತರ 3 ಸಾಲು ಉಳುಮೆ



ಭತ್ತಕ್ಕೆ ಜೀವಾಮೃತ ಸಿಂಪಡಣೆ

ಮಾಡಿ ಸುಮಾರು 12 ದಿನ ಕೊಳೆಯಲು ಬಿಟ್ಟೆವು.

22-7-2020ರಂದು 'ಶ್ರೀ' ಪದ್ಧತಿಯಲ್ಲಿ ಸಸಿ ನಾಟಿ ಮಾಡಿದೆವು. ನಾಟಿಯಾದ 10 ದಿನಕ್ಕೆ ವೇಸ್ಟ್ ಡಿಕಾಂಪೋಸ ರನ್ನು 100 ಲೀ. ದ್ರಾವಣದಲ್ಲಿ ಬಿಟ್ಟೆವು. ನಂತರ 18ನೇ ದಿನಕ್ಕೆ ಕೈಯಿಂದ ಮೊದಲನೆಯ ಕಸ ತೆಗೆದು ಜೀವಾಮೃತ ಸಿಂಪರಣೆ ಮಾಡಿದ ನಂತರ 25ನೇ ದಿನಕ್ಕೆ ಘನ ಜೀವಾಮೃತ ಹಾಕಿದ ನಂತರ ಬೆಳೆ ನೋಡಲು ಚೆನ್ನಾಗಿ ಕಾಣಿಸಿತು. 15 ರಿಂದ 25 ದಿನಗಳವರಗೆ ಆ ದಾರಿಯಲ್ಲಿ ಹೋಗುವ ರೈತರು ನನ್ನ ಬೆಳೆಯನ್ನು ನೋಡಿ ನಗುತ್ತಾ ಹೋಗುವದು ಗಮನಕ್ಕೆ ಬಂತು, ಅವನಿಗೆ ಕೆಲಸವಿಲ್ಲ ಈತರ ಬೆಳೆ ಬೆಳೆಯುತ್ತಾನೆ, ತಲೆ ಕೆಟ್ಟಿದೆ ಅಂತ ಬೈದರು. ನನಗೆ ಜನ ಮಾತಾಡುವುದೇ ಒಂದು ಚಿಂತೆಯಾಗಿ ಕಾಡಲಾರಂಭಿಸಿತ್ತು. ಏನಾದರೂ ಆಗಲ್ಲಿ ನನ್ನ ಮನೆಗೆ ಬೇಕಾಗುವಷ್ಟು ಆದರೆ ಸಾಕು ಅಂತ ತಿರ್ಮಾನಿಸಿದೆ.

30ನೇ ದಿನಕ್ಕೆ 60 ಕೆ.ಜಿ. ಎರೆಹುಳು ಗೊಬ್ಬರ ಹಾಕಿದೆ. 35 ರಿಂದ 40ನೇ ದಿನಕ್ಕೆ ಪರವಾಗಿಲ್ಲ ಅಂತ ಖಾತರಿಯಾ ಯಿತು. ನಂತರಗದ್ದೆಯ ಬುಡದಲ್ಲಿ ಮರಿಗಳು (ತಂಡೆಗಳು) ಹೆಚ್ಚಾಗತೊಡಗಿದವು. ಸುಮಾರು 28ರಿಂದ 36ರ ಸರಾಸರಿ ಯಲ್ಲಿ ಮರಿಗಳು ಬಂದವು. ಗರಿಗಳು ನೇಪಿಯರ್ ಮೇವಿನ ಬೆಳೆಯ ತರ ಇದೆ ಅಂತ ಮಾತನಾಡಿದರು. ಆಗಿದ್ದಾಗಲಿ ಅಂತಗಟ್ಟಿ ಮನಸ್ಸು ಮಾಡಿ ಗದ್ದೆಯನ್ನು ಚೆನ್ನಾಗಿ ಒಣಗಲು ಬಿಟ್ಟೆವು. ಸುಮಾರು 15 ದಿನ ನೀರು ಕೊಡಲಿಲ್ಲ. 15 ದಿನದ ನಂತರ ನೀರು ಕೊಟ್ಟೆ. 4 ಚೀಲ ತಿಪ್ಪೆಗೊಬ್ಬರದ ಪುಡಿ ತಂದು ಚೆಲ್ಲಿದೆ. ಜೊತೆಗೆ ಸುಮಾರು 10 ಲೀ. ಪಂಚಗವ್ಯ ತಂದು ಸಿಂಪರಣೆ ಮಾಡಿದೆ. ಮತ್ತೆ ಎರಡನೇ ಸಲ ಕಳೆ ತೆಗೆದೆವು. ಈಗ ಗದ್ದೆ ನೋಡಲು ಅಂದವಾಗಿ ಕಾಣತೊಡಗಿತು.

ಸುಮಾರು 65 ರಿಂದ 70ನೇ ದಿನಕ್ಕೆ ಕೀಟಗಳು ಕಾಣ ತೊಡಗಿದವು. ಅರ್ಧ ಕೆ.ಜಿ. ಬೆಳ್ಳುಳ್ಳಿ, ಅರ್ಧ ಕೆ.ಜಿ. ಹಸಿ ಮೆಣಸಿನಕಾಯಿ ಮತ್ತು 50 ಗ್ರಾಂ ಕರಿ ತಂಬಾಕು ಸೇರಿಸಿ ರುಬ್ಬಿ 10 ಲೀ. ನೀರು ಹಾಕಿ 10 ದಿನ ಕೊಳೆಯಲು ಬಿಟ್ಟು ನಂತರ ಸೋಸಿ ಸಿಂಪರಣೆ ಮಾಡಿದೆ. ಕೀಟಗಳು ನಿಯಂತ್ರಣಕ್ಕೆ ಬಂತು. 82 ದಿನದ ಬೆಳೆ ಸುಮಾರು 3.5ರಿಂದ 4 ಅಡಿ ಎತ್ತರಕ್ಕೆ ಬೆಳೆದ್ದು ನಿಂತಿತ್ತು.

ಮುಂದೆ ಸಣ್ಣದಾಗಿ (ಕುಸುಮ) ಹೂ ಬರುವುದು ಕಾಣಿಸಿತು. ಕೇವಲ ಒಂದು ವಾರ ಅಂತರದಲ್ಲಿ ಹೂ ಬಿಡಲು ಕಾಂಡ ಉಬ್ಬಿ ನಿಂತಿತ್ತು. ಆಗ ಮತ್ತೊಮ್ಮೆ ಕೀಟ ಮತ್ತು ರೋಗ ನಿಯಂತ್ರಣಕ್ಕೆ ಪೂಚಿಮರಂದು ಎನ್ನುವ ಸಾವಯವ ದ್ರಾವಣ ತಯಾರಿಸಿ ಸಿಂಪಡಣೆ ಮಾಡಿದೆ. ಹುಲುಸಾಗಿ ತೆನೆ ಬರಲು ಆರಂಭಿಸಿತ್ತು. ಆ ತೆನೆಗಳು ನೋಡಲು ತುಂಬಾ ಸುಂದರವಾಗಿತ್ತು. ನನ್ನ ಪಕ್ಕದ ರಾಸಾಯನಿಕ ಬೆಳೆಯ ತೆನೆಗಿಂತ ಎರಡು ಪಟ್ಟು ಉದ್ದವಾದ ತೆನೆಗಳಿದ್ದವು. ದಾರಿಯಲ್ಲಿ ಹೋಗುವ ರೈತರು ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತೆ ಬೆಳೆದು ನಿಂತಿತ್ತು.

20 ಗುಂಟೆ ಬೆಳೆಯಲು ಸುಮಾರು 5400 ರೂ. ಖರ್ಚು ಬಂದಿತ್ತು. ಕಡಿಮೆ ಖರ್ಚಿನಲ್ಲಿ ಉತ್ತಮ ಬೆಳೆ ಬರುತ್ತಾ ಇರುವುದಕ್ಕೆ ನನಗೆ ತುಂಬಾ ಹರುಷ ತಂದಿದೆ. ಈಗ ನಮ್ಮ ಬೆಳೆ ಕಟಾವಿಗೆ ಸಿದ್ದವಾಗಿದೆ. ಕೆಲವು ತೆನೆ ಪರೀಕ್ಷಿಸಲು ಕಾಳಿನ ಎಣಿಕೆ ಮಾಡಿದೆ. ನಂಬುವುದಕ್ಕೆ ಕಷ್ಟವಾಗಬಹುದು ಪ್ರತಿ ತೆನೆಯಿಂದ 379ರಿಂದ 542ರವರೆಗೆ ಕಾಳಿನ ಸಂಖ್ಯೆ ಕಂಡು ಬಂತು. ನನ್ನ 20 ಗುಂಟೆ ಜಮೀನಿನಲ್ಲಿ ಸುಮಾರು 14ರಿಂದ 16 ಚೀಲ ಇಳುವರಿ ಪಡೆಯುವ ನಿರೀಕ್ಷೆಯಲ್ಲಿ ಇದ್ದೇನೆ. ನಾನು ಮುಂದಿನ ಬೇಸಿಗೆ ಬೆಳೆಗೆ ಒಂದೂವರೆ ಎಕರೆ ಪ್ರದೇಶದಲ್ಲಿ ಅನೇಕ ದೇಸಿ ತಳಿಗಳನ್ನು ಹಾಕಲು ತಿರ್ಮಾನಿ ಸಿದ್ದೇನೆ.

ಮುಂದುವರೆದ ಭಾಗವಾಗಿ ನಾವು ಏಳು ಜನ ಸಾವ ಯವ ರೈತರು ಸೇರಿ ನಮ್ಮದೆ ಆದ ಒಂದು ಸಂಘವನ್ನು ರಚನೆ ಮಾಡಿಕೊಂಡು ನಮ್ಮಲ್ಲಿ ಉತ್ಪಾದನೆಯಾದ ಭತ್ತವನ್ನು ಶುದ್ಧೀಕರಿಸಿ ಬೀಜೋತ್ಪಾದನೆ ಮಾಡಿ ಆಸಕ್ತ ರೈತರಿಗೆ ವಿತರಿಸಲು ನಿರ್ಧರಿಸಿದ್ದೇವೆ. ಈಗಾಗಲೇ ದೇಶಿಯ ಭತ್ತದ ಬೀಜಗಳಿಗೆ ತುಂಬಾ ಬೇಡಿಕೆ ಬಂದಿದೆ. ನಮ್ಮಲ್ಲಿರುವ ಶುದ್ಧೀಕರಿಸಿದ ಬೀಜವನ್ನು ಮಾರಾಟ ಮಾಡಿ ಉಳಿದ ಭತ್ತವನ್ನು ಮೌಲ್ಯವರ್ಧನೆ ಮಾಡಲು ನಿರ್ಧರಿಸಿದ್ದೇವೆ.

06-11-2020ರಂದು ದೇಶಿಯ ಭತ್ತದ ಕ್ಷೇತ್ರೋತ್ಸವ ಹಮ್ಮಿಕೊಂಡೆವು. ಸ್ಮೆಕ್ ಸಂಸ್ಥೆಯ ಮುಖ್ಯಸ್ಥರು ಮತ್ತು ಹಿರಿಯರಾದ ಡಾ॥ ಶ್ರೀನಿವಾಸ್ ಮುದ್ರಕರ್ತ ಹಾಗೂ ಕೃಷಿ ಸಂಶೋಧನಾ ಕೇಂದ್ರದ ತಳಿ ವಿಜ್ಞಾನಿಗಳಾದ ಡಾ॥ ಮಹಾಂತ ಶಿವಯೋಗಯ್ಯ ಹಿರೇಮಠ, ಹಾಗೂ ಜಂಟಿ ಕೃಷಿ ನಿರ್ದೇ ಶಕರಾದ ಡಾ॥ ಶಿವಕುಮಾರ ಹಾಗೂ ವಿಶೇಷ ಆಹ್ವಾನಿತ ರಾಗಿ ದೇಸಿಭತ್ತದ ತಳಿಯ ಸಂರಕ್ಷಕರಾದ ಶ್ರೀ ಆಂಜನೇಯ ಕುಂಬಳೂರು ಮತ್ತು ಅನೇಕ ಪ್ರಗತಿಪರ ರೈತರು ಮತ್ತು ಸ್ಮೆಕ್ ಸಂಸ್ಥೆಯ ಅಧಿಕಾರಿಗಳು ಭಾಗವಹಿಸಿದ್ದರು.

ನಾವು ಎಲ್ಲಾರು ಸೇರಿ ಒಂದು ಸಂಕಲ್ಪ ಮಾಡೋಣ ನಿಧಾನವಾಗಿ ರಾಸಾಯನಿಕ ಬಿಟ್ಟು ನಮ್ಮ ಪೂರ್ವಜರ ಹಾಗೇ ಸಾವಯವ ಕೃಷಿಯತ್ತ ಸಾಗೋಣ.

– **ಪರ್ವತಯ್ಯ ಸ್ವಾಮಿ,** ರೈತರು, ಹೊಸಳ್ಳಿ, ಗಂಗಾವತಿ

---

ದೇಸೀ ಭತ್ತ ಮತ್ತು ಅಕ್ಕಿ ಬೇಕಾದವರು ಸಂಪರ್ಕಿಸಿ :
**9739506761**

# ಡಯಾಂಚ; ಮಣ್ಣಿಗೆ ಹೊದಿಸಿದ ಕವಚ

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕು ರಾಮಸಾಗರ ಗ್ರಾಮದ ರೈತ ಕೃಷ್ಣಪ್ಪ ಮಧ್ಯಮ ಕೃಷಿಕರು. ಇವರಿಗೆ 5 ಎಕರೆ ಜಮೀನು ಇದೆ. ಇವರ ಪೂರ್ವಜರು ಬೇಸಾಯವನ್ನು ಮಾಡುವುದರ ಜೊತೆಗೆ ಎತ್ತು, ಎಮ್ಮೆ, ಆಕಳು, ಮೇಕೆ ಹಾಗೂ ಕುರಿಗಳನ್ನು ಸಾಕುತ್ತಿದ್ದರು. ಇದರಿಂದ ಬರುವಂತ ಸಗಣಿ ಗೊಬ್ಬರವನ್ನು ಹಾಕಿ ಬೆಳೆಗಳಿಂದ ಅಧಿಕ ಇಳುವರಿಯನ್ನು ಪಡೆಯುತ್ತಿದ್ದರು. ಆ ಕಾಲದಲ್ಲಿಯೇ 1 ಎಕರೆ ಜಮೀನಿನಲ್ಲಿ 40ರಿಂದ 45 ಚೀಲ ಭತ್ತವನ್ನು ಬೆಳೆಯುತ್ತಿದ್ದರಂತೆ. ನಂತರದ ವರ್ಷಗಳಲ್ಲಿ ಕೃಷ್ಣಪ್ಪನವರ ತಂದೆಯಾದ ಹನುಮಂತಪ್ಪ ಸಗಣಿ ಗೊಬ್ಬರದ ಜೊತೆಗೆ ಡಯಾಂಚ ಮುಂತಾದ ಹಸಿರೆಲೆ ಗೊಬ್ಬರ ಬಳಸಿ 1 ಎಕರೆ ಜಮೀನಿಗೆ 35 ರಿಂದ 40 ಚೀಲದವರೆಗೆ ಭತ್ತವನ್ನು ಬೆಳೆಯುತ್ತಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ.

ಇವರ ತಂದೆಯವರು ತೀರಿಕೊಂಡ ನಂತರ ಕೃಷ್ಣಪ್ಪ ತಮ್ಮ ತಂದೆಯವರು ಅನುಸರಿಸುತ್ತಿದ್ದ ಬೇಸಾಯ ಪದ್ಧತಿಯನ್ನೇ ಆದಷ್ಟೂ ಮುಂದುವರಿಸಿಕೊಂಡು ಬಂದರು. ಆದರೆ ಹಸಿರೆಲೆ ಗೊಬ್ಬರ ಹಾಕುವುದನ್ನು ನಿಲ್ಲಿಸಿ ಕೇವಲ ಸಗಣಿ ಗೊಬ್ಬರವನ್ನಷ್ಟೇ ಬಳಸುತ್ತಿದ್ದರು. ಕ್ರಮೇಣ ದನಕರುಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದ ಕಾರಣ ಸಗಣಿ ಗೊಬ್ಬರದ ಲಭ್ಯತೆ ಕಡಿಮೆಯಾಯಿತು. ಇದರ ಪರಿಣಾಮವಾಗಿ ಭತ್ತದಲ್ಲಿ ಸರಿಯಾಗಿ ಇಳುವರಿ ಬರಲಿಲ್ಲ. ಇದರಿಂದ ಕೃಷ್ಣಪ್ಪನವರು ಬೇರೆ ಕಡೆಯಿಂದ ಸಗಣಿ ಗೊಬ್ಬರವನ್ನು ಖರೀದಿ ಮಾಡಿ ಜಮೀನಿಗೆ ಹಾಕಬೇಕಾಯಿತು. ಆದರೆ ಇದರಿಂದ ಒಂದು ಎಕರೆಗೆ ಸುಮಾರು 10 ಸಾವಿರದವರೆಗೂ ಗೊಬ್ಬರದ ಖರ್ಚು ಬಂತು. ಅಂದರೆ ಇವರ 5 ಎಕರೆ ಜಮೀನಿಗೆ 50,000 ರೂ.ಗಳನ್ನು ಖರ್ಚು ಮಾಡಬೇಕಾಯಿತು.

ಕೆಲವೇ ವರ್ಷಗಳಲ್ಲಿ ಇದರಿಂದ ಕೃಷ್ಣಪ್ಪನವರಿಗೆ ಸಾಲ ಬಾಧೆ ಜಾಸ್ತಿ ಆಗುತ್ತಾ ಹೋಯಿತು. ಇದರಿಂದ ಬೇಸರಗೊಂಡರು. ಏನು ಮಾಡಬೇಕೆಂಬ ಆಲೋಚನೆಯಲ್ಲಿದ್ದಾಗ ಇವರಿಗೆ ತಮ್ಮ ತಂದೆಯವರ ಕಾಲದಲ್ಲಿ ಗದ್ದೆಗೆ ಕೆಲವು ಬಾರಿ ಡಯಾಂಚ ಹಾಕುತ್ತಿದ್ದ ವಿಷಯ ನೆನಪಾಯಿತು. ಈ ಒಂದು ಯೋಚನೆ ಬಂದಿದ್ದೇ ತಡ 2010ರ ಮುಂಗಾರಿಗೆ ಮುನ್ನ ಐದು ಎಕರೆ ಜಮೀನಿಗೆ 5000 ಖರ್ಚು ಮಾಡಿ ಡಯಾಂಚ ಬೀಜವನ್ನು ತಂದು ಹಾಕಿಯೇ ಬಿಟ್ಟರು. 40 ದಿನಗಳ ನಂತರ ಅದನ್ನು ಭೂಮಿಯಲ್ಲಿ ಮಲ್ಚಿಂಗ್ ಮಾಡಿ ಭತ್ತವನ್ನು ನಾಟಿ ಮಾಡಿದರು.

ಈ ವರ್ಷ ಮತ್ತೆ ಇವರ ತಾತ ಮತ್ತು ತಂದೆಯ ಕಾಲದಂತೆಯೇ ಎಕರೆಗೆ ಸುಮಾರು 40 ಚೀಲ ಭತ್ತದ



ಬೆಳೆದು ನಿಂತಿರುವ ಡಯಾಂಚ

ಇಳುವರಿ ಪಡೆದಿದ್ದಾರೆ. ಹೊರಗಡೆಯಿಂದ ಸಗಣಿ ಗೊಬ್ಬರ ಖರೀದಿಗೆ ಮಾಡುತ್ತಿದ್ದ 50 ಸಾವಿರಕ್ಕೆ ಬದಲಾಗಿ ಕೇವಲ 5 ಸಾವಿರ ಖರ್ಚು ಮಾಡಿದ್ದು ವಿಶೇಷ. ಇದರಿಂದ ಸಂತೋಷಗೊಂಡ ಕೃಷ್ಣಪ್ಪನವರು ಇನ್ನು ಮುಂದೆ ಪ್ರತಿ ವರ್ಷವೂ ಡಯಾಂಚ ಹಸಿರೆಲೆ ಗೊಬ್ಬರವನ್ನು ಹಾಕುವುದಾಗಿ ಹೇಳುತ್ತಾರೆ. ಅಲ್ಲದೆ ರಸಗೊಬ್ಬರಗಳ ಬಳಕೆಯನ್ನು ಸಂಪೂರ್ಣ ತ್ಯಜಿಸುವುದಾಗಿ ತೀರ್ಮಾನಿಸಿದ್ದಾರೆ. ಇದೊಂದು ಉತ್ತಮ ನಿರ್ಧಾರ.

ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಹಲವು ರೈತರು ಹಸಿರೆಲೆ ಗೊಬ್ಬರಗಳನ್ನು ಬಳಸುತ್ತಿದ್ದಾರೆ. ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳೂ ಈ ಬಗ್ಗೆ ಮಾಹಿತಿ ನೀಡುತ್ತಿವೆ. ಆದರೆ ಎಲ್ಲಾ ರೈತರೂ ಇದರತ್ತ ಗಮನಹರಿಸಿಲ್ಲ. ಅವರಿಗೆ ರಸಗೊಬ್ಬರಗಳ ಮೇಲೆಯೇ ಹೆಚ್ಚು ನಂಬಿಕೆ. ಈ ಮನೋಭಾವವನ್ನು ಬದಲಾಯಿಸುವ ನಿಟ್ಟಿನಲ್ಲಿ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ ಶ್ರಮಿಸುತ್ತಿದೆ. ಕೃಷ್ಣಪ್ಪನವರಂತಹ ಮಾದರಿ ರೈತರನ್ನು ಗುರುತಿಸಿ ಇತರೆ ರೈತರಿಗೆ ಅವರಿಂದಲೇ ಮಾಹಿತಿ ವಿನಿಮಯ ಮಾಡಿಸುವ ಪ್ರಯತ್ನಗಳು ನಡೆಯುತ್ತಿವೆ.

**ಹಸಿರೆಲೆ ಗೊಬ್ಬರದಿಂದ ಆಗುವ ಲಾಭಗಳು**

1) ಮಣ್ಣಿನ ಫಲವತ್ತತೆಯನ್ನು ಕಾಪಾಡುತ್ತದೆ.
2) ರಸಗೊಬ್ಬರಗಳ ಬಳಕೆಗೆ ಕಡಿವಾಣ.
3) ಖರ್ಚು ಕಡಿಮೆಯಾಗುತ್ತದೆ, ಇಳುವರಿ ಹಾಗೂ ಆದಾಯ ಜಾಸ್ತಿಯಾಗುತ್ತದೆ.
4) ನೀರಿನ ಉಳಿತಾಯ
5) ಹಸಿರೆಲೆ ಗೊಬ್ಬರದಿಂದ ಬೆಳೆದಂತಹ ಆಹಾರವನ್ನು ಊಟ ಮಾಡಿದರೆ ಮನುಷ್ಯನ ಆರೋಗ್ಯಕ್ಕೆ ಉತ್ತಮ.

– ವೆಂಕಟೇಶ್ವರ, ಸಮುದಾಯ ಸಂಘಟಕರು, ಸ್ಮೈಕ್ ಸಂಸ್ಥೆ

# ನೀರು ಬಳಕೆದಾರರ ಸಹಕಾರ ಸಂಘಗಳ ಚುನಾವಣಾ ಪ್ರಕ್ರಿಯೆ

ಕೋವಿಡ್ ಕಾರಣದಿಂದಾಗಿ ಕೆಲವು ತಿಂಗಳುಗಳಿಂದ ನೆನೆಗುದಿಗೆ ಬಿದ್ದಿದ್ದ ನೀರು ಬಳಕೆದಾರರ ಸಹಕಾರ ಸಂಘಗಳ ಚುನಾವಣೆ ಪ್ರಕ್ರಿಯೆಗೆ ಈಗ ಚಾಲನೆ ದೊರೆತಿದೆ. ಪರಿಣಾಮವಾಗಿ ಎಡದಂಡೆ ಕಾಲುವೆಗೆ ಬರುವ ಹೊಸಳ್ಳಿ, ಹಿರೇಜಂತಕಲ್, ಢಣಾಪುರ-2, ಚಿಕ್ಕಜಂತಕಲ್, ಸಂಗಾಪುರ ಮತ್ತು ಬಂಡಿಹರ್ಲಾಪುರ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಚುನಾವಣೆ ನಡೆದು ಹೊಸ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬಂದಿದೆ. ಕೊಪ್ಪಳ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು ಸಂಘಗಳ ಭಾಗವಹಿಸುವಿಕೆ ಮಹತ್ವ ತಿಳಿಸಿ ಚುನಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು. ಅದರಂತೆ ಈ ಕೆಳಕಂಡ ಪ್ರಕ್ರಿಯೆಗಳು ನಡೆದವು.

1) ಎಲ್ಲಾ ಷೇರುದಾರರಿಗೆ ನೋಟಿಸ್ ನೀಡಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ತಿಳಿಸಲಾಯಿತು.
2) ಪ್ರತಿ ಸಂಘಕ್ಕೆ ಚುನಾವಣಾಧಿಕಾರಿ ಮತ್ತು ರಿಟರ್ನಿಂಗ್ ಅಧಿಕಾರಿಗಳನ್ನು ನೇಮಕ ಮಾಡಲಾಯಿತು.
3) ಪ್ರತಿ ಸಂಘಕ್ಕೆ ಪ್ರತ್ಯೇಕವಾಗಿ ಚುನಾವಣಾ ವೇಳಾಪಟ್ಟಿ ತಯಾರಿಸಲಾಯಿತು.
4) ಒಟ್ಟು ಷೇರುದಾರರ ಪಟ್ಟಿ ಮಾಡಿ ಅದರಲ್ಲಿ ಮರಣ ಹೊಂದಿದವರು ಹಾಗೂ ಜಮೀನು ಮಾರಾಟ ಮಾಡಿದವರ ಪಟ್ಟಿಯನ್ನು ಪ್ರತ್ಯೇಕಗೊಳಿಸಿ ಬಾಕಿ ಉಳಿದ ಸದಸ್ಯರ ಪಟ್ಟಿಯನ್ನು ತಯಾರಿಸಲಾಯಿತು.
5) ಕಾರ್ಯಕಾರಿ ಸಮಿತಿಯ ಜವಾಬ್ದಾರಿ ಮತ್ತು ಸಮಿತಿಯಲ್ಲಿ ವರ್ಗವಾರು ಎಷ್ಟು ಸದಸ್ಯರು ಇರಬೇಕೆಂದು ತಿಳಿಸಲಾಯಿತು.
6) ಸಂಘದಲ್ಲಿ ಮಹಿಳಾ ಸದಸ್ಯರಿಗೆ ಹೆಚ್ಚು ಅವಕಾಶ ನೀಡುವಂತೆ ತಿಳಿಸಲಾಯಿತು.
7) ನಿಗದಿತ ವೇಳಾಪಟ್ಟಿಯಂತೆ ಮೊದಲು ನಿರ್ದೇಶಕರನ್ನ ಆಯ್ಕೆ ಮಾಡಲು ನಾಮಪತ್ರಗಳನ್ನ ನೀಡಿ, ಎಲ್ಲರ ತೀರ್ಮಾನದ ನಂತರ ಅವಿರೋಧವಾಗಿ ಆಯ್ಕೆ ಮಾಡಲಾಯಿತು.
8) ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ನಾಮಪತ್ರಗಳನ್ನ ಪಡೆದು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

### ಸಂಘವಾರು ಆಯ್ಕೆಯಾದ ಸ್ಥಾನಗಳು

| ಸಂಘದ ಹೆಸರು | ಸಾಮಾನ್ಯ | ಹಿಂ. ವರ್ಗ | ಎಸ್.ಸಿ | ಎಸ್.ಟಿ. | ಮಹಿಳೆ | ನೀಡಿರುವ ಮಹಿಳಾ ಸ್ಥಾನ | ಒಟ್ಟು |
|---|---|---|---|---|---|---|---|
| 1) ಹೊಸಳ್ಳಿ | 6 | 2 | – | – | 2 | 3 | 10 |
| 2) ಚಿಕ್ಕಜಂತಕಲ್ | 6 | 2 | 1 | – | 2 | 3 | 11 |
| 3) ಸಂಗಾಪುರ | 6 | 2 | 1 | 1 | 2 | 3 | 12 |
| 4) ಹಿರೇಜಂತಕಲ್ | 6 | 2 | – | – | 2 | 2 | 10 |
| 5) ಬಂಡಿಹರ್ಲಾಪುರ | 6 | 2 | 1 | 1 | 2 | 2 | 12 |
| 6) ಢಣಾಪುರ-2 | 6 | 1 | 1 | 1 | 1 | 1 | 11 |
| 7) ಬಿಚ್ಚಾಲಿ* | 6 | 2 | 1 | 1 | 2 | 3 | 12 |

*ಬಿಚ್ಚಾಲಿ ನೀರು ಬಳಕೆದಾರರ ಸಹಕಾರ ಸಂಘದಲ್ಲಿ ಹೊಸ ಕಾರ್ಯಕಾರಿ ಸಮಿತಿ ರಚನೆ ಮಾಡಲಾಯಿತು.


ಬಿಚ್ಚಾಲಿ ನೀರು ಬಳಕೆದಾರರ ಸಹಕಾರ ಸಂಘ

### ಸಂಘಗಳ ಮುಂದಿನ ಹೆಜ್ಜೆ

ಪ್ರತಿಯೊಂದು ಸಂಘಕ್ಕೆ ಕರ್ನಾಟಕ ನೀರಾವರಿ ನಿಗಮದ ಸಹಾಯಕ ಅಭಿಯಂತರು ನಾಮನಿರ್ದೇಶನ ಸದಸ್ಯರಾಗಿರುತ್ತಾರೆ. ಸಂಘದಲ್ಲಿ ಒಟ್ಟು 13 ಸದಸ್ಯರಿರುತ್ತಾರೆ. ಇವರಿಗೆ ಪ್ರತಿ ಸಂಘದ ಸಭೆಗೆ ಭಾಗವಹಿಸಲು ನೋಟಿಸು ನೀಡಿ ಮತ್ತು ಚರ್ಚೆ ವಿಷಯಗಳನ್ನು ಲಿಖಿತವಾಗಿ ನೀಡಬೇಕು ಮತ್ತು ಪ್ರತಿ ಸಂಘವು ತಿಂಗಳಿಗೆ ಕನಿಷ್ಠ ಒಂದು ಸಭೆಯನ್ನು ಮಾಡಬೇಕು.

1) ಪ್ರತಿ ಸಂಘವು ಅಮಾನತ್ ಬ್ಯಾಂಕ್ ಖಾತೆಯನ್ನು ಉಳಿತಾಯ ಖಾತೆಗೆ ವರ್ಗಾವಣೆಗೊಳಿಸಿಕೊಳ್ಳಬೇಕು.
2) ಪ್ರತಿ ಸಂಘವು ಕರ್ನಾಟಕ ನೀರಾವರಿ ನಿಗಮದ ಜೊತೆ 'ನೀರು ನಿರ್ವಹಣೆ' ಒಪ್ಪಂದ ಮಾಡಿಕೊಂಡು ನೀರಿನ ಕರವನ್ನು ಸಂಘದ ಮೂಲಕ ವಸೂಲಿ ಮಾಡುವುದು.
3) ತುಂಗಭದ್ರಾ ಕಾಡಾದಿಂದ ದೊರೆಯುವ ಪ್ರತಿ ವರ್ಷಕ್ಕೆ 1 ಲಕ್ಷ ಕಾರ್ಯಾನುದಾನ ಪಡೆಯಲು ಮನವಿ ಸಲ್ಲಿಸುವುದು.
4) ಪ್ರತಿ ಸಂಘದವರು ಶೇ.100ರಷ್ಟು ಸದಸ್ಯತ್ವ ಪಡೆಯುವುದು.
5) ಪ್ರತಿ ಸಂಘದವರು ತುಂಗಭದ್ರಾ ಕಾಡಾದಿಂದ ದೊರೆಯುವ ಒಂದು ಸಲದ ಸಂಘದ ನಿರ್ವಹಣೆ ಹಣ ಪಡೆಯಲು ಪ್ರತಿ ಹೆಕ್ಟೇರಿಗೆ ರೂ. 120 ವಸೂಲಿ ಮಾಡಿ ಕಟ್ಟುವುದು, ಇದರಿಂದ ಸರ್ಕಾರದಿಂದ 1,080 ರೂ. ನೀಡಲಾಗುವುದು, ಒಟ್ಟು 1200 ರೂ.ಗಳನ್ನು ಠೇವಣಿ ಇಟ್ಟು ಬರುವ ಬಡ್ಡಿಯಿಂದ ಸಂಘಗಳನ್ನ ಮುನ್ನೆಡೆಸುವುದು.

– **ವೀರೇಶ್**, ಸಮುದಾಯ ಸಂಘಟಕರು, ಸ್ಮೆಕ್ ಸಂಸ್ಥೆ

# ನೀರುಳಿತಾಯದ ನೇರ ಭತ್ತ ಬಿತ್ತನೆ ವಿಧಾನ

ಡೈರೆಕ್ಟ್ ಸೀಡ್ ರೈಸ್ (ಡಿ.ಎಸ್.ಆರ್) – ಅಂದರೆ ನೇರ ಬೀಜ ಬಿತ್ತನೆ ವಿಧಾನ. ಇದು ಭತ್ತ ನಾಟಿಯ ಪರ್ಯಾಯ ಮಾರ್ಗವಾಗಿದ್ದು ಗಂಗಾವತಿ ಪ್ರದೇಶದಲ್ಲಿ ಹೆಚ್ಚು ವ್ಯಾಪಕ ವಾಗಿದೆ. ಸಾಂಪ್ರದಾಯಿಕ ಮತ್ತು ಚಾಲ್ತಿಯಲ್ಲಿರುವ ವಿಧಾನ ವೆಂದರೆ ಭತ್ತವನ್ನು ನರ್ಸರಿ ಬಿಟ್ಟು ಪೈರು ನಾಟಿ ಮಾಡುವುದು. ಆದರೆ ಇದು ಅತ್ಯಂತ ಶ್ರಮದಾಯಕ ಮತ್ತು ಹೆಚ್ಚು ನೀರು ಕೇಳುತ್ತದೆ. ಕೂಲಿ ಆಳುಗಳ ಕೊರತೆಯ ಈ ಸಮಯದಲ್ಲಿ ನೇರ ಬಿತ್ತನೆ ವಿಧಾನ ಅತ್ಯಂತ ಸೂಕ್ತ.

ಯೋಜನಾ ಸಹಾಯ ಸಂಸ್ಥೆಯು ಗಂಗಾವತಿ ಅಚ್ಚುಕಟ್ಟು ಪ್ರದೇಶಗಳಲ್ಲಿ ನೇರ ಬಿತ್ತನೆ ವಿಧಾನವನ್ನು ಪರಿಚಯಿಸಿದೆ. ನೇರ ಬಿತ್ತನೆ ವಿಧಾನದಲ್ಲಿ ಒಣಭೂಮಿಗೆ ಬೀಜಗಳನ್ನು ಸಾಲುಗಳಲ್ಲಿ ಬಿತ್ತಲಾಗುತ್ತದೆ. ಸಾಲುಗಳ ನಡುವೆ ಹೆಚ್ಚು ಅಂತರ ಇರುವುದರಿಂದ ಚೆನ್ನಾಗಿ ಗಾಳಿ ಆಡುತ್ತದೆ, ಹಾಗಾಗಿ ಇದರಿಂದ ರೋಗಗಳು ಮತ್ತು ಕೀಟಗಳ ದಾಳಿ ಯನ್ನು ತಡೆಯಲು ಸಹಾಯ ಮಾಡುತ್ತದೆ. ಸಾಂಪ್ರದಾಯಿಕ ವಿಧಾನದಡಿಯಲ್ಲಿ ಬೆಳೆದ ಭತ್ತಕ್ಕೆ ಹೋಲಿಸಿದರೆ ಈ ವರ್ಷ ನೇರ ಭತ್ತದ ಬಿತ್ತನೆ ತಾಕುಗಳು ಕೀಟ ಹಾವಳಿಯಿಂದ ಮುಕ್ತವಾಗಿರುವುದನ್ನು ಗಮನಿಸಲಾಯಿತು.

ಮುಂಗಾರು ಋತುವಿನಲ್ಲಿ ಹೊಸಹಳ್ಳಿ, ಚಿಕ್ಕಜಂತಕಲ್, ಮತ್ತು ಸಂಗಾಪುರ ಗ್ರಾಮಗಳ 7 ರೈತರ ಹೊಲಗಳಲ್ಲಿ ಈ ವಿಧಾನದ ಪ್ರಾತ್ಯಕ್ಷಿಕೆ ಕೈಗೊಳ್ಳಲಾಯಿತು. ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಈ ಚಟುವಟಿಕೆಗೆ ತಾಂತ್ರಿಕ ನೆರವು ನೀಡಿದೆ. 'ಕೀಟನಾಶಕದ ಬಳಕೆಯಲ್ಲಿ ಮತ್ತು ಕಾರ್ಮಿಕರ ಮೇಲೆ ಅವಲಂಬನೆಯನ್ನು ಕಡಿಮೆ ಮಾಡುವ ಈ ಹೊಸ ವಿಧಾನ ದಿಂದ ನಾವು ಸಂತೋಷಪಡುತ್ತೇವೆ, ಏಕೆಂದರೆ ಇದು ಸಾಂಪ್ರ ದಾಯಿಕ ವಿಧಾನಕ್ಕೆ ಹೋಲಿಸಿದರೆ ವೆಚ್ಚವನ್ನು ಶೇ.25ರಿಂದ ಶೇ.30ರಷ್ಟು ಕಡಿಮೆ ಮಾಡುತ್ತದೆ. ಅಲ್ಲದೆ ನೀರಿನ ಬಳಕೆಯನ್ನು ಸಹ ಕಡಿಮೆ ಮಾಡುತ್ತದೆ' ಎಂದು ಚಿಕ್ಕಜಂತಕಲ್ ಗ್ರಾಮದ ರೈತ ಮುಕ್ಕಣ್ಣ ಹೇಳುತ್ತಾರೆ.

# ನೇರ ಭತ್ತ ಬಿತ್ತನೆ ವಿಧಾನ; ಕಡಿಮೆ ಖರ್ಚು ಇಳುವರಿ ಹೆಚ್ಚು

ಭತ್ತ ಬಿತ್ತನೆಗೆ ಕಾರ್ಮಿಕರ ಕೊರತೆಯನ್ನು ಹೇಗೆ ನಿವಾರಿ ಸುವುದು ಎಂದು ಚಿಕ್ಕಜಂತಕಲ್ ಹಳ್ಳಿಯ ರೈತರು ಪರದಾಡು ತ್ತಿದ್ದರೆ, ಅದೇ ಹಳ್ಳಿಯ ಮೆಹಬೂಬ್‌ಸಾಬ್ ನಿಶ್ಚಿಂತೆಯಿಂದ ಇದ್ದರು. ಇವರು ಭತ್ತ ಬಿತ್ತನೆ ಮಾಡಲು ಕಾರ್ಮಿಕರನ್ನು ನೇಮಿಸಿ ಕೊಳ್ಳುವ ಅಗತ್ಯವಿರಲಿಲ್ಲ. ಕಾರಣ, ನೇರ ಬಿತ್ತನೆ ವಿಧಾನ ಅಳವಡಿಕೆಗೆ ಮುಂದಾಗಿದ್ದರು. ಮೆಹ ಬೂಬ್‌ಸಾಬ್ ಸಣ್ಣ ಕೃಷಿಕರಾಗಿದ್ದು, ಗಂಗಾವತಿ ಕೆಳದಂಡೆ ಕಾಲುವೆಯಡಿ 2.18 ಎಕರೆ ನೀರಾವರಿ ಭೂಮಿಯನ್ನು ಹೊಂದಿದ್ದಾರೆ, ಇದು ಅವರ 5 ಸದಸ್ಯರ ಕುಟುಂಬಕ್ಕೆ ಜೀವನೋ ಪಾಯವಾಗಿದೆ. ಸಾಂಪ್ರದಾಯಿಕ ಭತ್ತ ಬಿತ್ತನೆ ವಿಧಾನವನ್ನೇ ಅನುಸರಿಸುತ್ತಿದ್ದ ಇವರು ಹೊಸ ವಿಧಾನಕ್ಕೆ ಬದಲಾಗಿದ್ದು ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಿಂದ.

## ಯಶೋಗಾಥೆ

05-06-2020ರಂದು ಕೃಷಿ ವಿಜ್ಞಾನ ಕೇಂದ್ರ, ಗಂಗಾ ವತಿಯಲ್ಲಿ ಸ್ಮೈಕ್ ಸಂಸ್ಥೆ ವತಿಯಿಂದ 'ಶ್ರೀ' ಪದ್ಧತಿ, ನೇರ ಬಿತ್ತನೆ ಪದ್ಧತಿ (ಡಿ.ಎಸ್.ಆರ್.), ದೇಸಿ ಭತ್ತದ ಬೀಜಗಳ ಮಹತ್ವ ಹಾಗೂ ಸಾವಯವ ಕೃಷಿ ಬಗ್ಗೆ ತರಬೇತಿ ನೀಡಲಾಯಿತು. ಆಗ ಮೆಹಬೂಬ್‌ಸಾಬ್ ಡಿಎಸ್‌ಆರ್ ಪದ್ಧತಿಯತ್ತ ಆಕರ್ಷಿತ ರಾದರು. ಹಿಂದಿನ ವರ್ಷಗಳಲ್ಲಿ, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಮತ್ತು ಕಳೆನಾಶಕಗಳನ್ನು ಹೇರಳವಾಗಿ ಬಳಸುತ್ತಾ ಹೆಚ್ಚು ನೀರು ಬಳಸಿ ಭತ್ತವನ್ನು ಬೆಳೆಯುತ್ತಿದ್ದರು. ಅದರಲ್ಲೂ ಬಿತ್ತನೆ ಕಾಲಕ್ಕೆ ಆಳುಗಳು ಸಿಗದೆ ಹಲವು ತೊಂದರೆ ಅನುಭವಿಸಿದ್ದರು. ಹಾಗಾಗಿ ಒಂದು ಎಕರೆ ಯಲ್ಲಿ ನೇರ ಬಿತ್ತನೆ ವಿಧಾನ ಅಳವಡಿಕೆಗೆ ಮುಂದಾದರು.



ಬೆಳವಣಿಗೆ ಹಂತದ ಗದ್ದೆಯಲ್ಲಿ ಮೆಹಬೂಬ್

ಮಾಮೂಲಿ ಪದ್ಧತಿಯಲ್ಲಿ ಎಕರೆಗೆ 30 ಕೆ.ಜಿ. ಬೀಜ ಬೇಕಾಗಿತ್ತು, ಆದರೆ ಡಿಎಸ್‌ಆರ್ ಪದ್ಧತಿಯಲ್ಲಿ 12 ಕೆ.ಜಿ. ಸಾಕಾಯಿತು. ಸ್ಮೈಕ್ ಸಂಸ್ಥೆಯು ಇವರಿಗೆ ಶುದ್ಧ ಗಂಗಾವತಿ ಸೋನಾ ಭತ್ತದ ಬೀಜವನ್ನು ವಿತರಿಸಿತು. ದಿನಾಂಕ 18-06-2020 ರಂದು ಟ್ರ್ಯಾಕ್ಟರ್ ಮುಂಖಾತರ ಬಿತ್ತಿದರು. ಮುಂದಿನ 15-20 ದಿನಗಳಲ್ಲಿ ಮಳೆ ಕಾಣಲಿಲ್ಲ. ಹಾಗಾಗಿ ಮೊಳಕೆ ಸರಿಯಾಗಿ ಬರಲಿಲ್ಲ. ಈ ಸಮಯದಲ್ಲಿ ಗದ್ದೆ ನೋಡಿದರೆ ಬೆಳೆ ಕೈಗೆ ಬರುವ ಯಾವುದೇ ಭರವಸೆ ಇರಲಿಲ್ಲ. ನದಿಯಿಂದ ನೀರುಣಿಸಲು ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ. 'ಈ ಪದ್ಧತಿ ಅನುಸರಿಸಿ ತಪ್ಪು ಮಾಡಿದೆ ಎಂದು ಅನಿಸುತ್ತಿತ್ತು' ಎಂದು ನಗುತ್ತಾರೆ ಮೆಹಬೂಬ್. ಆದರೆ 20ನೇ ದಿನದ ನಂತರ ಮಳೆ ಬಂದಿತು. ಒತ್ತಾಗಿ ಬೆಳೆದಿದ್ದ

ಕಡೆಯಿಂದ ಸಸಿಗಳನ್ನು ಕಿತ್ತು ಸಸಿ ಹುಟ್ಟದಿದ್ದ ಕಡೆ ನಾಟಿ ಮಾಡಿದರು. ನಂತರದ ದಿನಗಳಲ್ಲಿ ಮಳೆ ಉತ್ತಮವಾಗಿತ್ತು. ಒಂದೆರಡು ಸಲ ಕಳೆ ತೆಗೆದರು. ಆಗ ಉತ್ತಮವಾಗಿ ತೆಂಡೆಗಳು ಬರ ತೊಡಗಿ ಸಮಾಧಾನವಾಯಿತು.

ಬೆಳವಣಿಗೆ ವೃದ್ಧಿಸಲು ಸ್ಕೈಕ್ ಸಂಸ್ಥೆಯು ವೇಸ್ಟ್ ಡಿಕಂಪೋಸರ್ ಹಾಗೂ ಘನ ಜೀವಾಮೃತವನ್ನು ನೀಡಿದರು. ಇದು ಉತ್ತಮ ಫಲಿತಾಂಶವನ್ನು ನೀಡಿತು. ಭತ್ತ ಆರೋಗ್ಯಕರ ವಾಗಿ ಬೆಳೆಯ ತೊಡಗಿತು. ಹೂ ಬಿಡುವ ಹಂತದಲ್ಲಿ ಕಾಂಡ ಕೊರೆಯುವ ಸಮಸ್ಯೆ ಕಂಡುಬಂದಿತು. ಈ ಸಮಸ್ಯೆಯನ್ನು ಎದುರಿಸಲು 15 ದಿನಗಳಿಗೊಮ್ಮೆ 3 ಬಾರಿ ಪೂಚಿಮರಂದು ಎಂಬ ಜೈವಿಕ ಕೀಟನಾಶಕ ಬಳಸಿದರು. ಸಮಸ್ಯೆ ನಿವಾರಣೆ ಆಯಿತು.

12-11-2020ರಂದು ಯಂತ್ರ ಬಳಸಿ ಕಟಾವು ಮಾಡಿದರು. 23 ಕ್ವಿಂಟಾಲ್ ಇಳುವರಿ ಬಂದಿತು. ಹಿಂದಿನ ವರ್ಷ ಇದೇ ಒಂದು ಎಕರೆಗೆ ರೂ. 30,000 ಖರ್ಚು ಬಂದಿತ್ತು. ಇಳುವರಿಯೂ ಇಷ್ಟೇ ಇತ್ತು. ಈ ವರ್ಷ ನೇರ


ಭತ್ತದ ಕಟಾವು

ಬಿತ್ತನೆ ಹಾಗೂ ಸಾವಯವ ಅನುಸರಣೆಯಿಂದ ರೂ. 12,000 ಮಾತ್ರ ಖರ್ಚು ಬಂದಿತ್ತು. ಅಂದರೆ ಖರ್ಚಿನಲ್ಲಿಯೇ ರೂ. 18,000 ಉಳಿತಾಯ. 'ಮುಂದಿನ ಹಂಗಾಮಿಗೆ ನಮ್ಮ ಎರಡು ಎಕರೆಯಲ್ಲೂ ಇದೇ ವಿಧಾನ ಅನುಸರಿಸುತ್ತೇವೆ, ಸಾವಯವದಲ್ಲೇ ಬೆಳೆಯುತ್ತೇವೆ' ಎನ್ನುತ್ತಾರೆ ಮೆಹಬೂಬ್ ಅವರ ಪತ್ನಿ ಮುಮ್ತಾಜ್.

– ನಿಂಗಯ್ಯ, ಕೃಷಿ ವಿಸ್ತರಣಾಧಿಕಾರಿ, ಸ್ಕೈಕ್ ಸಂಸ್ಥೆ

## ಸುಸ್ಥಿರ ಕಬ್ಬಿನ ಕೃಷಿಗೆ ಶ್ರೀಕಾರ

ಸುಸ್ಥಿರ ಕಬ್ಬು ಬಿತ್ತನೆ ಒಂದು ನೂತನ ವಿಧಾನ. ಇದರ ತತ್ವಗಳು ಹೀಗಿವೆ;

- ಒಂದು ಕಣ್ಣಿನ ಕಬ್ಬು ನೆಡುವುದು ಅಥವಾ 25-35 ದಿನಗಳ ಎಳೆ ಸಸಿ ನೆಡುವುದು.
- ಸಾಲಿನಿಂದ ಸಾಲಿಗೆ ನಾಲ್ಕು ಅಡಿ ಅಂತರ ನೀಡುವುದು.


ಟ್ರೇನಲ್ಲಿ ಬೆಳೆದ ಕಬ್ಬಿನ ವೀಕ್ಷಣೆ

- ಇದರಿಂದ ಸೂರ್ಯನ ಬೆಳಕು, ಗಾಳಿ ಮತ್ತು ನೀರಿನ ಸಮರ್ಥ ಬಳಕೆ ಆಗುತ್ತದೆ.
- ಕಬ್ಬಿನ ಸಾಲುಗಳ ನಡುವೆ ಅಂತರಬೆಳೆಯಾಗಿ ಅರಿಶಿಣ, ಶುಂಠಿ, ಸೊಪ್ಪು ಇನ್ನಿತರೆ ಬೆಳೆಗಳನ್ನು ಹಾಕುವುದು.
- ಸಾವಯವ ವಿಧಾನ ಅಳವಡಿಕೆ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕದ ಬಳಕೆಗೆ ಕಡಿವಾಣ.
- ಕಟಾವಿನ ನಂತರ ಕಬ್ಬಿನ ಗದ್ದೆಗೆ ಅಥವಾ ಸೋಗೆಗೆ ಬೆಂಕಿ ಹಾಕದೆ ಅಲ್ಲೇ ಕಳಿಯುವಂತೆ ಮಾಡುವುದು.
- ಕೂಳೆ ಬೆಳೆಗೆ ಉತ್ತೇಜನ ನೀಡುವುದು.

ಈ ವಿಧಾನವು ಕಬ್ಬಿನ ಇಳುವರಿಯನ್ನು ಕನಿಷ್ಠ ಶೇ.20 ರಿಂದ ಶೇ.30 ಹೆಚ್ಚಿಸುತ್ತದೆ ಹಾಗೂ ನೀರು ಮತ್ತು ರಾಸಾಯನಿಕಗಳ ಬಳಕೆಯನ್ನು ಶೇ.25ರಷ್ಟು ಕಡಿಮೆ ಮಾಡುತ್ತದೆ. ವಿಜಯನಗರ ಅಚ್ಚುಕಟ್ಟು ಪ್ರದೇಶದಲ್ಲಿ ಈ ವಿಧಾನವನ್ನು ಉತ್ತೇಜಿಸಲು ಆಯ್ದ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಚಿಕ್ಕೋಡಿ ಮತ್ತು ಸಂಕೇಶ್ವರಕ್ಕೆ ಕಳುಹಿಸಲಾಗಿದೆ. ಮುಂಬರುವ ಋತುವಿನಲ್ಲಿ ಈ ವಿಧಾನವನ್ನು ಅಳವಡಿಸಿಕೊಳ್ಳಲು 13 ರೈತರು ಮುಂದೆ ಬಂದಿದ್ದಾರೆ. ಕಬ್ಬು ಕಣ್ಣಿನ ಕಟ್ಟರ್ ಯಂತ್ರಗಳನ್ನು ಅಹಮದಾಬಾದ್‌ನಿಂದ ತರಿಸಲಾಗಿದೆ. ಕೃಷಿ ಪಂಡಿತ ಪ್ರಶಸ್ತಿ ವಿಜೇತ ಮತ್ತು ಪ್ರಗತಿಪರ ರೈತ ಸುರೇಶ್ ದೇಸಾಯಿಯವರಿಂದ ಎರಡು ದಿನಗಳ ಪ್ರಾತ್ಯಕ್ಷಿಕೆ ತರಬೇತಿ ಆಯೋಜಿಸಲಾಗಿತ್ತು.

# ಕಡಿಮೆ ವೆಚ್ಚದಲ್ಲಿ ಎರೆಹುಳು ಗೊಬ್ಬರ ತಯಾರಿಕೆ

ನಾನು ಪಂಪನಗೌಡ, ಗಂಗಾವತಿ ತಾಲ್ಲೂಕಿನ ಹೊಸಳ್ಳಿ ಗ್ರಾಮ, ಭತ್ತದ ಕೃಷಿಕ. ಹತ್ತು ಎಕರೆ ಜಮೀನು ಹೊಂದಿದ್ದು ಹಲವು ವರ್ಷಗಳಿಂದ ರಾಸಾಯನಿಕ ಕೃಷಿ ಮಾಡುತ್ತಾ ಬಂದಿದ್ದೇನೆ. ಕಳೆದ 3–4 ವರ್ಷಗಳಿಂದ ಹೈನುಗಾರಿಕೆ ಪ್ರಾರಂಭಿಸಿದೆ. ವ್ಯವಸ್ಥಿತವಾದ ಕೊಟ್ಟಿಗೆ ಕಟ್ಟಿ 6 ಸೀಮೆ ಹಸು, 2 ದೇಸಿ ಆಕಳು ಮತ್ತು 2 ಎಮ್ಮೆ ಖರೀದಿಸಲಾಯಿತು. ಆಳುಗಳು ಸರಿಯಾದ ರೀತಿಯಲ್ಲಿ ದನಗಳ ಪಾಲನೆ ಮಾಡದೆ ಹೋದರು. ನನಗೆ ತುಂಬಾ ಕಷ್ಟವಾಯಿತು. ಜೊತೆಗೆ ನಷ್ಟ ಕೂಡ ಅನುಭವಿಸಿದೆ. ಬೇಡಪ್ಪ ಹೈನುಗಾರಿಕೆ ಸಹವಾಸ ಅಂತ ಹೇಳಿ ದನಗಳನ್ನು ಮಾರಿಬಿಟ್ಟೆ. ದನದ ಮನೆ ಖಾಲಿ ಉಳಿಯಿತು.

ಅದೇ ಸಂದರ್ಭದಲ್ಲಿ ನಮ್ಮ ಹೊಲಕ್ಕೆ ಬಂದ ಸ್ಮೆಕ್ ಸಂಸ್ಥೆಯ ಕೃಷ್ಣಪ್ರಸಾದ್ ಮತ್ತು ನಿಂಗಯ್ಯ ಎರೆಹುಳು ಗೊಬ್ಬರ ತಯಾರಿಸಿಕೊಳ್ಳಿ ಅಂತ ತಿಳಿಸಿ ನಿಮಗೆ ಬೇಕಾದಷ್ಟು ಬಳಸಿಕೊಂಡು ಹೆಚ್ಚಿನ ಗೊಬ್ಬರ ಮಾರಾಟ ಮಾಡಿ, ತುಂಬಾ ಬೇಡಿಕೆ ಇದೆ ಎಂದಾಗ ಎಲ್ಲಿ ಮಾಡೋದು ಅಂತ ಜಾಗ ಶೋಧಿಸಲು ಆರಂಭಿಸಿದೆ. ಖಾಲಿ ಇರುವ ನನ್ನ ದನದ ಮನೆ ಅವರ ಕಣ್ಣಿಗೆ ಬಿತ್ತು. ಇಲ್ಲಿ ಎರೆಹುಳು ಗೊಬ್ಬರ ತಯಾರಿಸಲು ಪರವಾಗಿಲ್ಲ ಅಂತ ತೀರ್ಮಾನಿಸಿದರು. ನಾವು ಪ್ರಾರಂಭ ಮಾಡಿದೆವು.

ಮೂರು ಅಡಿ ಅಗಲ, ಆರು ಅಡಿ ಉದ್ದದ 12 ಬೆಡ್‌ಗಳನ್ನು ನಿರ್ಮಾಣ ಮಾಡಿ ಕೊಟ್ಟಿಗೆ ಗೊಬ್ಬರ ಹಾಕಿ, ಸ್ವಲ್ಪ ನೀರು ಕೊಟ್ಟು ಗೊಬ್ಬರ ಕೊಳೆಯುವ ಹಾಗೆ ಮಾಡಿದೆ.

ಒಂದು ವಾರದ ನಂತರ ಕಡ್ಡಿರಾಂಪುರಕ್ಕೆ ಹೋಗಿ ಅಲ್ಲಿನ ರೈತರ ಬಳಿ 300 ರೂ.ನಂತೆ 1 ಕೆ.ಜಿ. ಹುಳು ತಂದೆ. ಆದರೆ ಆ 1 ಕೆ.ಜಿ.ಯಲ್ಲಿ 150 ರಿಂದ 200 ಗ್ರಾಂ ಅಷ್ಟೇ ಹುಳು ಕೊಟ್ಟಿದ್ದರು, ಉಳಿದದ್ದು ಬರೀ ಗೊಬ್ಬರ. ವಿಧಿ ಇಲ್ಲದೆ ತಂದು ಒಂದು ಬೆಡ್‌ಗೆ ಹಾಕಿದೆ. ನಂತರ ಬೇರೆ-ಬೇರೆ ರೈತರ ಹತ್ತಿರ ಹುಳು ಬೇಕು ಅಂತ ವಿಚಾರಸಿದಾಗ ನಮ್ಮ ಭಾಗದಲ್ಲಿ ಎಲ್ಲಿಯೂ ಸಿಗಲಿಲ್ಲ. ಕೊನೆಗೆ ಕೊಪ್ಪಳದ ಹತ್ತಿರ ಪರ್ವತಯ್ಯ ಸ್ವಾಮಿಯವರ ಆತ್ಮೀಯರಾದ ಸಾವಯವ ಕೃಷಿಕ ಶ್ರೀ ಆನಂದರೆಡ್ಡಿ ದಂಬರಹಳ್ಳಿ ಅವರು ನನ್ನ ಬಳಿ ಹುಳು ಇದೆ ಅಂತ ತಿಳಿಸಿದ್ದರಂತೆ. ನಾನು, ಸ್ವಾಮಿ ಮತ್ತು ನಮ್ಮ ಗ್ರಾಮದ ಹನುಮೇಶ ಹೋದೆವು. ಅವರ ತೋಟ ಸಂಪೂರ್ಣ ಸಾವಯವ. ಗಿಡದ ಬುಡದಲ್ಲಿ ಕೈಯಾಡಿಸಿದರೆ ಸಾಕು ಹಾಗೇ ಎರೆಹುಳು ಕಾಣುವುದು ನೋಡಿ ನಮಗೆ ಗಾಬರಿಯಾಯಿತು.

ಆನಂದರೆಡ್ಡಿಯವರು 20 ಕೆ.ಜಿ.ಯಷ್ಟು ಹುಳುಗಳನ್ನು ಯಾವುದೇ ಹಣವಿಲ್ಲದೆ ಕೊಟ್ಟರು. ಅವರಿಗೆ ಧನ್ಯವಾದ ಹೇಳಿ ಊರಿಗೆ ಬಂದು ಎಲ್ಲಾ 12 ಬೆಡ್‌ಗಳಲ್ಲಿ ಹುಳು ಬಿಟ್ಟೆವು. ಎರಡು ತಿಂಗಳಲ್ಲಿ, 1300 ಕೆ.ಜಿ.ಯಷ್ಟು ಎರೆಹುಳು ಗೊಬ್ಬರ ತಯಾರಾಯಿತು. ಅದನ್ನು ನನ್ನ ಸಾವಯವ ಭತ್ತದ ಬೆಳೆಗೆ ಬಳಸಿಕೊಂಡು ಉಳಿದಿದ್ದನ್ನು ಇತರೆ ರೈತರಿಗೆ ವಿತರಿಸಿದೆ. ಈಗ 12 ಬೆಡ್ ಗೊಬ್ಬರ ರೆಡಿಯಾಗಿದೆ. ಹುಳುಗಳ ಸಂಖ್ಯೆ ಕೂಡ ಹೆಚ್ಚಾಗಿದೆ. ಮುಂದಿನ ಬೆಳೆಗೆ ಎರೆಹುಳು ಗೊಬ್ಬರ ತಯಾರಾಗಿದೆ. ಜೊತೆಗೆ ಮಾರಾಟಕ್ಕೂ ನನ್ನ ಬಳಿ ಶುದ್ಧವಾದ ಎರೆಹುಳು ಗೊಬ್ಬರ ಇದೆ. 1 ಕೆ.ಜಿ. ಎರೆಹುಳು ಗೊಬ್ಬರಕ್ಕೆ 8 ರೂ. ದರ



ಗದ್ದೆಗೆ ಎರೆಗೊಬ್ಬರ ಬಳಸುತ್ತಿರುವ ಪರ್ವತಸ್ವಾಮಿ

ಮಾಡಿದ್ದೇನೆ. ಅತಿ ಕಡಿಮೆ ವೆಚ್ಚದಲ್ಲಿ ಎರೆಹುಳು ಗೊಬ್ಬರ ತಯಾರಿಕೆಗೆ ನೆರವಾದ ನನ್ನ ಸ್ನೇಹಿತರಾದ ಪರ್ವತಯ್ಯ ಸ್ವಾಮಿ, ಶಂಕರಗೌಡ ಹಾಗೂ ಸ್ಮೆಕ್ ಸಂಸ್ಥೆಗೆ ಧನ್ಯವಾದಗಳು.

– **ಪಂಪನಗೌಡರು,** ರೈತರು, ಹೊಸಳ್ಳಿ, ಗಂಗಾವತಿ. ಮೊ.: 9880172457

## ಕಡಿಮೆ ಖರ್ಚಿನ ಎರೆಹುಳು ಗೊಬ್ಬರಗಳ ಬಳಕೆ

ವಿಜಯನಗರ ಅಚ್ಚುಕಟ್ಟು ಪ್ರದೇಶದಲ್ಲಿ ಅತಿಯಾದ ನೀರು ನಿಲ್ಲಿಸಿ ಮತ್ತು ರಾಸಾಯನಿಕ ಗೊಬ್ಬರವನ್ನು ಬಳಸಿ ಮಣ್ಣಿನ ಫಲವತ್ತತೆ ಹೊರಟುಹೋಗಿತ್ತು. ಇದನ್ನು ತಿಳಿದು ಸ್ಮೆಕ್ ಸಂಸ್ಥೆಯು ರೈತರಿಗೆ ಕಡಿಮೆ ನೀರನ್ನು ಬಳಕೆ ಮಾಡಿ 'ಶ್ರೀ' ಪದ್ಧತಿಯಲ್ಲಿ ಭತ್ತ ಬೆಳೆಯುವುದು ಮತ್ತು ಸಾವಯವ ಪದ್ಧತಿ ಅನುಸರಿಸುವಂತೆ ರೈತರಿಗೆ ತಿಳಿಸಿಕೊಡುತ್ತಿದೆ.

ಇದರಲ್ಲಿ ಮುಖ್ಯವಾಗಿ ಕಡಿಮೆ ಖರ್ಚಿನ ಎರೆಹುಳು ಗೊಬ್ಬರ ತಯಾರಿಕೆ ವಿಧಾನವನ್ನು ಪ್ರಚಾರಪಡಿಸುತ್ತಿದೆ. ಇದಕ್ಕಾಗಿ ಬಂಡ್ರಾಳು, ರಾಯಚೂರು ಕೃಷಿ ವಿಶ್ವವಿದ್ಯಾಲಯ ಮುಂತಾದ ಕಡೆ ಅಧ್ಯಯನ ಪ್ರವಾಸ ಕೊಂಡೊಯ್ದು ಮಾಹಿತಿ ನೀಡುತ್ತಿದೆ. ಇದರಿಂದ ಹಲವಾರು ರೈತರು ಮುಂದೆ ಬಂದು ಎರೆಹುಳು ಘಟಕ ನಿರ್ಮಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಗಂಗಾವತಿ ಮೇಲ್ದಂಡೆ ಕಾಲುವೆ ಹೊಸಳ್ಳಿ ಗ್ರಾಮದ ಪಂಪನಗೌಡ, ಚಂದ್ರಶೇಖರ್, ಗಂಗಾವತಿ ಕೆಳದಂಡೆ ಕಾಲುವೆ ಚಿಕ್ಕಜಂತಕಲ್ ಗ್ರಾಮದ ಮಹದೇವಿ, ಮೆಹಬೂಬ್, ತುರ್ತಾ ಕಾಲುವೆ ಕೃಷ್ಣಾಪುರದ ಫಣಿಸಾಯಿ, ರಾಯಕಾಲುವೆಯ ನರಸಾಪುರದ ಭಾರತಿ ಮುಂತಾದ ರೈತರು.

ಈ ರೀತಿ ನಮ್ಮ ಸಂಸ್ಥೆಯ ತಂಡವು ಜನರ ಜೊತೆ ಬೆರೆತು ಅವರಿಗೆ ಎರೆಗೊಬ್ಬರದಿಂದಾಗುವ ಲಾಭಗಳ ಬಗ್ಗೆ ಮನವರಿಕೆ ಮಾಡಿಜನರ ಮನಸ್ಸನ್ನು ಪರಿವರ್ತನೆ ಮಾಡುವಲ್ಲಿ ಒಳ್ಳೆಯ ಕಾರ್ಯಸಾಧನೆ ಮಾಡಿದೆ.

– **ಸೂರ್ಯಕಾಂತ್ ಶೇಗುಣಸಿ,** ವ್ಯವಸ್ಥಾಪಕರು, ಸ್ಮೆಕ್ ಸಂಸ್ಥೆ

# ಕೈ ಹಿಡಿದ ಪುಷ್ಪ ಕೃಷಿ



ಕಾಕಡ ತೋಟದಲ್ಲಿ ಕೃಷಿಕ ವೀರೇಶ್

ವಿಜಯನಗರ ಕಾಲುವೆಯ ಬಲದಂಡೆಗೆ ಬರುವ ದೇಶನೂರು ಕಾಲುವೆಯ ಅಚ್ಚುಕಟ್ಟಿಗೆ ಸಂಬಂಧಿಸಿದ ವೀರೇಶ್ ಸಣ್ಣ ರೈತರು. 36 ವರ್ಷ ವಯಸ್ಸಾಗಿದ್ದು, 14 ಜನರ ದೊಡ್ಡ ಕುಟುಂಬ. ಇವರು ಬಿ.ಎ ಪದವೀಧರರಾಗಿದ್ದು, ಗ್ರಾಮ ಪಂಚಾಯಿತಿಯ ಮಾಜಿ ಉಪಾಧ್ಯಕ್ಷರು. 6 ಎಕರೆ ಜಮೀನು ಇದ್ದು ತುಂಬಾ ವರ್ಷಗಳಿಂದ ಭತ್ತವೇ ಮುಖ್ಯ ಬೆಳೆ. ಆದರೆ ಈ ವರ್ಷ-2020ರಿಂದ ಹೂವಿನ ಕೃಷಿಗೆ ಕೈಹಾಕಿದ್ದಾರೆ.

ವೀರೇಶ್ ಮದುವೆಯಾಗಿರುವುದು ಕಂಪ್ಲಿ ತಾಲೂಕಿನಲ್ಲಿ. ಅಲ್ಲಿಯ ಬಹುತೇಕ ರೈತರು ಪುಷ್ಪ ಕೃಷಿ-ಅದರಲ್ಲಿಯೂ ಕಾಕಡ ಹೂವಿನ ಕೃಷಿ ಅವಲಂಬಿಸಿರುವುದನ್ನು ಕಂಡು ಇವರೂ ಸಹ ಅರ್ಧ ಎಕರೆಯಲ್ಲಿ ಕಾಕಡ ಸಸಿ ನಾಟಿದರು. 2020ರ ಜೂನ್ ತಿಂಗಳಲ್ಲಿ 550 ಸಸಿಗಳನ್ನು ತಂದು ಅರ್ಧ ಎಕರೆಗೆ ನಾಟಿ ಮಾಡಿರುತ್ತಾರೆ. ಸಸಿಗಳಿಗೆ ರೂ. 1500 ಖರ್ಚು ಬಂದಿರುತ್ತದೆ. ಅಕ್ಟೋಬರ್ ತಿಂಗಳಿನಿಂದ ಮೊಗ್ಗು ಬಿಡಲು ಪ್ರಾರಂಭವಾಗಿದೆ. ಮೊದಲು 2 ಕೆ.ಜಿ.ಯಿಂದ ಪ್ರಾರಂಭವಾಗಿ ಈಗ (ಸೆಪ್ಟೆಂಬರ್) 10 ಕೆ.ಜಿ.ಯವರೆಗೂ ಕಾಕಡ ಮೊಗ್ಗು ಇಳುವರಿ ದೊರೆಯುತ್ತಿದೆ. ಪ್ರತಿದಿನ ಬೆಳಗ್ಗೆ 6 ಗಂಟೆಯಿಂದ 9 ಗಂಟೆಯವರೆಗೆ ಮೊಗ್ಗನ್ನು ಬಿಡಿಸಿ ಸಿರುಗುಪ್ಪ ಮಾರುಕಟ್ಟೆಗೆ ಕಳಿಸುತ್ತಾರೆ. ಕೆ.ಜಿ.ಗೆ ರೂ.120 ರಿಂದ 200ರವರೆಗೆ ಬೆಲೆ ದೊರೆತಿದೆ. ದೀಪಾವಳಿ ಹಬ್ಬದ ಸಮಯದಲ್ಲಿ ಕೆ.ಜಿ.ಗೆ 500ರಿಂದ 1,000 ರೂ.ವರೆಗೆ ಬೆಲೆ ಸಿಕ್ಕಿರುವುದು ವಿಶೇಷ. ಈ ಅವಧಿಯಲ್ಲಿ ಹೂ ಮಾರಾಟದಿಂದ ಒಟ್ಟು ರೂ. 30,000 ಆದಾಯ ಪಡೆದುಕೊಂಡಿರುತ್ತಾರೆ. ಮನೆಯಲ್ಲಿರುವ ಸದಸ್ಯರೆ ಇದರಲ್ಲಿ ತೊಡಗಿಸಿಕೊಂಡಿದ್ದು ಕೂಲಿಯವರನ್ನು ಕರೆದುಕೊಳ್ಳುತ್ತಿಲ್ಲ. ಹಾಗಾಗಿ ವೆಚ್ಚವೂ ಕಡಿಮೆ.

'ಮೊದಲು 6 ಎಕರೆ ಜಮೀನಿನಲ್ಲಿ ಭತ್ತ ಬೆಳೆದು 30,000 ರೂ. ನಿವ್ವಳ ಆದಾಯ ಪಡೆದುಕೊಳ್ಳುತ್ತಿದ್ದೆ, ಅದರೆ ಈಗ ಅರ್ಧ ಎಕರೆಯಲ್ಲೇ ಅಷ್ಟು ಬಂದಿರುತ್ತದೆ. ಇದು ನಮ್ಮ ಮನೆಯ ದಿನ ನಿತ್ಯದ ಖರ್ಚು-ವೆಚ್ಚಗಳಿಗೆ ಹಾಗೂ ಕೃಷಿ ವೆಚ್ಚಗಳಿಗೆ ಅನುಕೂಲವಾಗಿದೆ. ಇದಕ್ಕಾಗಿ ಹೊರಗಿನಿಂದ ಸಾಲ ಪಡೆದುಕೊಳ್ಳುವುದು ಕಡಿಮೆಯಾಗಿದೆ' ಎನ್ನುತ್ತಾರೆ ವೀರೇಶ್. ಅಲ್ಲದೆ ಭತ್ತಕ್ಕೆ ಹೋಲಿಸಿದರೆ ಹೂ ಕೃಷಿಗೆ ನೀರಿನ ಅಗತ್ಯವೂ ಕಡಿಮೆ ಎಂಬುದು ಇವರ ಅನುಭವ. ಹಾಗಾಗಿ ನೀರಿನ ಉಳಿತಾಯವೂ ಆಗಲಿದೆ.

ದೇಶನೂರು ಗ್ರಾಮದಲ್ಲಿ ಬಹುತೇಕ ರೈತರು ಅರ್ಧ ಎಕರೆಯನ್ನು ಹೊಂದಿರುವ ಸಣ್ಣ ರೈತರಾಗಿದ್ದು ಪುಷ್ಪ ಕೃಷಿಯನ್ನು ಮಾಡಿದರೆ ದಿನನಿತ್ಯದ ಖರ್ಚುಗಳಿಗೆ ಸರಿದೂಗಿಸಿಕೊಳ್ಳಬಹುದು. ಇದನ್ನು ಗಮನಿಸಿದ ಯೋಜನಾ ಸಹಾಯ ಸಂಸ್ಥೆಯಿಂದ ದೇಶನೂರು ಗ್ರಾಮದಲ್ಲಿ 1 ಮಹಿಳಾ ಉಪ ಸಮಿತಿ ರಚಿಸಲಾಗಿದ್ದು, ಆಸಕ್ತ ಸದಸ್ಯರುಗಳಿಗೆ ಪುಷ್ಪ ಕೃಷಿಯ ಬಗ್ಗೆ ಮಾಹಿತಿ ನೀಡುವ ಬಗ್ಗೆ ತೀರ್ಮಾನಿಸಲಾಗಿದೆ.



ಕಾಕಡ ಮೊಗ್ಗು

– ಮಂಜುಳಾ, ಸಮುದಾಯ ಸಂಘಟಕರು, ಸ್ನೇಕ್ ಸಂಸ್ಥೆ

# ಅಧ್ಯಯನ ಪ್ರವಾಸ



ಯೋಜನಾ ವ್ಯಾಪ್ತಿಯಡಿಯಲ್ಲಿ ಮಹಿಳೆಯರ ಮತ್ತು ರೈತರ ಹಾಗೂ ಕೃಷಿಯನ್ನು ಉತ್ತಮಪಡಿಸಲು ಸಂಸ್ಥೆ ವತಿಯಿಂದ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಲ್ಲಿ ಪ್ರಮುಖವಾಗಿ ಎರೆಹುಳು ಗೊಬ್ಬರದ ಬಳಕೆ ಮತ್ತು ತಯಾರಿಸುವ ವಿಧಾನದ ಮಾಹಿತಿ ತಿಳಿಯಲು 21-11-2020ರಂದು ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಪ್ರವಾಸ ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಡಾ॥ ಅರುಣ್‌ಕುಮಾರ್ ಹೊಸಮನಿ ಅವರು ಎರೆಹುಳು ಗೊಬ್ಬರ, ಎರೆಜಲದ ಬಗ್ಗೆ ಮಾಹಿತಿ ನೀಡಿದರು. ಜೊತೆಗೆ ಪ್ರಾಯೋಗಿಕವಾಗಿ ತೋರಿಸಲಾಯಿತು. ಒಟ್ಟು 10 ಮಂದಿ ಮಹಿಳೆಯರು ಹಾಗೂ ರೈತರು ಕ್ರಿಯಾಶೀಲರಾಗಿ ಭಾಗವಹಿಸಿ ತರಬೇತಿ ಪಡೆದುಕೊಂಡರು. ಮುಂದೆ ಇದನ್ನು ಅಳವಡಿಸಿಕೊಂಡು ಎರೆಗೊಬ್ಬರ ತಯಾರಿಕೆಗೆ ಮುಂದಾಗಿದ್ದಾರೆ.

– ಚಂದ್ರವರ್ಮರಾಜ, ಸಮುದಾಯ ಸಂಘಟಕರು, ಸ್ನೇಕ್ ಸಂಸ್ಥೆ

# ವಿಜಯನಗರ ಕಾಲುವೆಗಳ ಕಾಮಗಾರಿ ಪ್ರಗತಿ

**Physical Progress of civil works as of 31st October 2020 for VNC Package 1**

| Sl. No. | Name of Channel | Lining (Km.) Estimate | Lining (Km.) Achieved | Achieved (%) | Structures (Nos.) Estimate | Structures (Nos.) Achieved | Achieved (%) |
|---|---|---|---|---|---|---|---|
| 1 | Raya | 27.60 | 1.46 | 5.29 | 100 | 5 | 5.00 |
| 2 | Basavanna | 16.50 | 4.80 | 29.09 | 71 | 19 | 26.76 |
| 3 | Bella | 5.50 | 1.78 | 32.36 | 52 | 21 | 40.38 |
| 4 | Kalaghatta | 7.20 | 1.27 | 17.64 | 49 | 9 | 18.37 |
| 5 | Ramasagara | 15.39 | - | - | 57 | - | - |
| 6 | Kampli | 23.55 | - | - | 124 | - | - |
| 7 | Belagodahalla | 11.22 | - | - | 82 | - | - |
| 8 | Deshnuru | 12.66 | 4.60 | 36.33 | 30 | 11 | 36.67 |
| 9 | Siruguppa | 14.78 | - | - | 16 | - | - |
| 10 | Hulugi | 10.80 | 1.061 | 9.82 | 104 | 6 | 5.77 |
| 11 | Shivapura | 6.54 | 1.102 | 16.85 | 58 | 3 | 5.17 |
| 12 | Anegundi | 19.44 | 6.92 | 35.60 | 148 | 17 | 11.49 |
| 13 | Upper Gangavathi | 20.06 | 0.99 | 4.94 | 66 | 3 | 4.55 |
| 14 | Lower Gangavathi | 21.70 | 1.087 | 5.01 | 62 | 5 | 8.06 |
| 15 | Bichal | 14.50 | - | - | 23 | - | - |
| | **Total** | **227.44** | **25.07** | **11.02** | **1042** | **99** | **9.50** |


ಕಾರ್ಯಪಾಲಕ ಅಭಿಯಂತರರಾದ ಶ್ರೀ ಎಸ್.ಬಿ.ನಾಗಭೂಷಣ್
ಅವರಿಂದ ಕಾಮಗಾರಿ ವೀಕ್ಷಣೆ, ರಾಮಸಾಗರ


ಪ್ರಗತಿಯಲ್ಲಿ ಕಾಳಘಟ್ಟಿ ಕಾಲುವೆ ಕಾಮಗಾರಿ


**ಸಂಪಾದಕೀಯ ಮಂಡಳಿ**

ಶ್ರೀ ಎಸ್.ಹೆಚ್.ಮಂಜಪ್ಪ
ಶ್ರೀ ಎಸ್.ಬಿ. ನಾಗಭೂಷಣ್
ಡಾ. ಶ್ರೀನಿವಾಸ ಮುದ್ರಕರ್ತ
ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ
ಮುನಿರಾಬಾದ್, ಕೊಪ್ಪಳ ಜಿಲ್ಲೆ-583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ, ಮುನಿರಾಬಾದ್, ಕೊಪ್ಪಳ ಜಿಲ್ಲೆ-583233

**ಯೋಜನಾ ಸಹಾಯ ಸಂಸ್ಥೆ**
**ಸ್ಮೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್**
ನಂ.3/662, ಎಸ್.ವಿ.ಕೆ. ದೇವಾಲಯದ ಎದುರು,
5ನೇ ಅಡ್ಡರಸ್ತೆ, ಪಟೇಲ್ ನಗರ, ಹೊಸಪೇಟೆ-583201

**H.O. : SMEC INDIA Pvt. Ltd.**
1st Floor, West Wing, Novus Tower, Plot-18, Sec-18,
Gurugram, HARYANA - 122015, India.